ಐಕ್ಯರಂಗ


(ವಾರ ಪತ್ರಿಕೆ)

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 48 ಡಿಸಂಬರ್ 5, 1982 ಬೆಲೆ 60 ಪೈಸೆ

ದುಡಿಯುವ ಜನತೆಗೆ ಸಮರ್ಪಿತ ಬದುಕು

ಕಾಂ| ಪ್ರಮೋದ್ ಬಾಬು



ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಪೊಲಿಟ್‌ಬ್ಯೂರೋ ಸದಸ್ಯ, ಪ. ಬಂಗಾಲ ಎಡರಂಗ ಸರಕಾರದ ಚೇರ್‌ಮನ್ ಕಾಂ| ಪ್ರಮೋದ್ ದಾಸ್ ಗುಪ್ತಾ ಮಧ್ಯಾಹ್ನ (ಸೋಮವಾರ ನವೆಂಬರ್ 29) ಬೀಜಿಂಗ್‌ನಲ್ಲಿ ನಿಧನರಾದರು.

ಚೈನಾ ಸರಕಾರದ ಆಹ್ವಾನದ ಮೇರೆಗೆ ಅಕ್ಟೋಬರ್ 26ರಂದು ಬೀಜಿಂಗ್‌ಗೆ ತೆರಳಿದ್ದ ಕಾಂ| ಪ್ರಮೋದ್‌ರ ಒಟ್ಟಿಗೆ ಪ. ಬಂಗಾಲ ಘಟಕದ ರಾಜ್ಯ ಸಮಿತಿ ಸದಸ್ಯ ಕಾಂ| ಬುದ್ಧದೇವ ಭಟ್ಟಾಚಾರ್ಯ ಅವರೂ ಇದ್ದರು. ತೀವ್ರ ಶ್ವಾಸಕೋಶದ ತೊಂದರೆಯಿಂದ ಬಳಲುತ್ತಿದ್ದ ಕಾಂ| ಪ್ರಮೋದ್ ಬೀಜಿಂಗ್‌ನಲ್ಲಿ ಆಕ್ಯುಪಂಕ್ಚರ ಚಿಕಿತ್ಸೆ ಪಡೆಯುತ್ತಿದ್ದರು. ಆರೋಗ್ಯ ತುಂಬ ವಿಷಮಿಸಿದಾಗ ಕಾಂ| ಬಸವಪುನ್ನಯ್ಯ ಅವರು ಬೀಜಿಂಗ್‌ಗೆ ತೆರಳಿದ್ದರು.

(8ನೇ ಪುಟ ನೋಡಿ)

ಪಿ. ಬಿ. ಶ್ರದ್ಧಾಂಜಲಿ :

ಕಾಂ| ಪ್ರಮೋದ್ ದಾಸ್ ಗುಪ್ತಾ ಇನ್ನಿಲ್ಲ

ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ ಪೊಲಿಟ್‌ಬ್ಯೂರೋದ ಹಿರಿಯ ಸದಸ್ಯ, ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ ಪಶ್ಚಿಮ ಬಂಗಾಳ ರಾಜ್ಯ ಸಮಿತಿಯ ಕಾರ್ಯದರ್ಶಿ ಮತ್ತು ಪಶ್ಚಿಮ ಬಂಗಾಳದ ಎಡರಂಗದ ಅಧ್ಯಕ್ಷರಾಗಿದ್ದ ಕಾಮ್ರೇಡ್ ಪ್ರಮೋದ್ ದಾಸ್ ಗುಪ್ತ ಇನ್ನಿಲ್ಲವಾಗಿದ್ದಾರೆ. ಶ್ವಾಸಕೋಶದ ತೊಂದರೆಗೆ ಒಳಗಾಗಿದ್ದ ಅವರು ಕೆಲ ದಿನಗಳಿಂದ ಬೀಜಿಂಗ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು.

ಕಾಂ| ಪ್ರಮೋದ್ ದಾಸ್ ಗುಪ್ತಾ ಅವರಿಗೆ ಪೊಲಿಟ್‌ಬ್ಯೂರೋ ತನ್ನ ಶ್ರದ್ಧಾಂಜಲಿಯನ್ನರ್ಪಿಸುತ್ತಾ ಪರಿಷ್ಕರಣವಾದಕ್ಕೆ ಎದುರಾಗಿ ಅವಿಭಾಜಿತ ಕಮ್ಯುನಿಸ್ಟ್ ಪಕ್ಷದೊಳಗೆ ಅವರು ನಡೆಸಿದ ಹೋರಾಟ ಮತ್ತು ಸಿ.ಪಿ.ಐ. (ಎಂ) ನ್ನು ಕ್ರಾಂತಿಕಾರೀ ಪಕ್ಷವನ್ನಾಗಿ ಬೆಳೆಸುವಲ್ಲಿ ಅವರು ನೀಡಿದ ಕೊಡುಗೆಯನ್ನು ತುಂಬು ಹೃದಯದಿಂದ ಸ್ಮರಿಸಿದೆ.

ನವೆಂಬರ್ 29 ರಂದು ಕಾಲವಾದ ಪ್ರಮೋದ್ ದಾಸ್ ಗುಪ್ತ ಅವರು 1910ರ ಜುಲೈ 7 ರಂದು ಈಗಿನ ಬಾಂಗ್ಲಾ ದೇಶದಲ್ಲಿರುವ ಫರೀದ್‌ಪುರ ಜಿಲ್ಲೆಯಲ್ಲಿ ಜನ್ಮ ತಾಳಿದರು. ತಮ್ಮ ವಿದ್ಯಾರ್ಥಿ ದೆಸೆಯಲ್ಲಿ ಬಾರಿಸಾಲ್‌ನ ಬ್ರಿಜ್ ಮೋಹನ್ ಕಾಲೇಜಿನಲ್ಲಿ ಓದುತ್ತಿದ್ದ ಗುಪ್ತರವರು 'ಅನುಶೀಲನ' ಎಂಬ ಕ್ರಾಂತಿಕಾರೀ ಗುಂಪಿನಲ್ಲಿ ಸೇರಿ ಬ್ರಿಟೀಷ್ ಸಾಮ್ರಾಜ್ಯಶಾಹಿಗಳ ವಿರುದ್ಧ ಹೋರಾಡಿದರು. ಅಂದಿನ ದಿನಗಳಲ್ಲಿ ಬಂಗಾಳದ ಯುವಕರು ತಮ್ಮ ವೈಯಕ್ತಿಕ ಶೌರ್ಯದಿಂದ ಬ್ರಿಟೀಷರನ್ನು ಸೋಲಿಸಿ ದೇಶವನ್ನು ಸ್ವತಂತ್ರಗೊಳಿಸಬಹುದೆಂದು ನಂಬಿದ್ದರು.

ಅನುಶೀಲನ್ ಗುಂಪಿಗೆ ಸೇರಿದ ನಂತರ ಕಾಂ| ಪ್ರಮೋದ್ ದಾಸ್ ಗುಪ್ತ ತಮ್ಮ ರಾಜಕೀಯ ಚಟುವಟಿಕೆಯನ್ನು ಕಲ್ಕತ್ತಾಗೆ ವರ್ಗಾಯಿಸಿದರು.

ಸುಪ್ರಸಿದ್ಧ 'ಮೆಚುವಾ ಬಜಾರ್' ಬಾಂಬ್ ಪ್ರಕರಣಕ್ಕೆ ಸಂಭಂಧಿಸಿದಂತೆ 1929ರಲ್ಲಿ ಸತೀಶ್ ಪೆಕ್ರಾಶಿ, ಸುಧಾನ್ಸು ದಾಸ್ ಗುಪ್ತ, ಸತ್ಯಬ್ರತ್ ಸೇನ್ ಮುಂತಾದವರೊಂದಿಗೆ ಬಂಧನಕ್ಕೊಳಗಾದರು. ಕೆಲವರನ್ನು ಆಪಾದನೆಗೊಳಪಡಿಸಿ ಜೈಲಿನಲ್ಲಿರಿಸಲಾಯಿತು. ಆದರೆ ಕಾಮ್ರೇಡ್ ಪ್ರಮೋದ್‌ದಾಸ್ ಗುಪ್ತರವರ ಮೇಲಿನ ಆಪಾದನೆಯನ್ನು ದೃಢಪಡಿಸಲು ಸರಿಯಾದ ಸಾಕ್ಷ್ಯಾಧಾರಗಳಿರಲಿಲ್ಲ. ಆದರೆ ಅವರನ್ನು ಬಂಗಾಳ ಅಪರಾಧ ಶಾಸನ ತಿದ್ದುಪಡಿ ಕಾಯಿದೆಯನ್ವಯ ಬಂಧನದಲ್ಲಿರಿಸಲಾಯಿತು. ಎಂಟು ವರ್ಷಗಳ ಕಾಲ ಅವರು ಬಂಗಾಳದ ವಿವಿಧ ಜೈಲುಗಳಲ್ಲಿ ಬಂಧನದಲ್ಲಿದ್ದು 1937ರಲ್ಲಿ ಬಿಡುಗಡೆಯಾದರು.

ಮೇ 1, 1938 ರಲ್ಲಿ ಕಮ್ಯುನಿಸ್ಟ್ ಪಕ್ಷದ ಸದಸ್ಯತ್ವ ಪಡೆದ ಗುಪ್ತರವರು ಕಲ್ಕತ್ತದ ಹಡಗುಕಟ್ಟೆ ಕೆಲಸಗಾರರ ನಡುವೆ ಕೆಲಸ ಮಾಡತೊಡಗಿದರು. ಪಕ್ಷದ ಕಲ್ಕತ್ತಾ ಜಿಲ್ಲಾ ಸಮಿತಿಯ ಕಾರ್ಯದರ್ಶಿಯಾಗಿ ಕೆಲಸ ಮಾಡಿದ ಗುಪ್ತಾರವರು ಎರಡನೆಯ ಮಹಾಯುದ್ಧದ ಸಮಯದಲ್ಲಿ ಸ್ವಲ್ಪ ಕಾಲ ಭೂಗತರಾಗಿದ್ದರು. ನಂತರ ಅವರು ಬಂಧನಕ್ಕೊಳಗಾಗಿ 1942 ರಲ್ಲಿ ಪಕ್ಷದ ಮೇಲಿನ ನಿಷೇಧವನ್ನು ತೆಗೆದು ಹಾಕಿದ ನಂತರ ಬಿಡುಗಡೆಗೊಳಿಸಲ್ಪಟ್ಟರು.

(8ನೇ ಪುಟ ನೋಡಿ)

ರಾಜ್ಯ ಸಮಿತಿಯ ಕಂಬನಿ

ಪ್ರಮೋಧ್ ದಾಸ್ ಗುಪ್ತಾರ ನಿಧನ ಪಕ್ಷಕ್ಕೆ ಮತ್ತು ದುಡಿಯುವ ಜನತೆಯ ಚಳವಳಿಗೆ ತುಂಬಲಾರದ ನಷ್ಟ ಎಂದು ಸಿ. ಪಿ. ಐ. (ಎಂ) ರಾಜ್ಯ ಸಮಿತಿ ಶೋಕಿಸಿದೆ.

ಪರಿಷ್ಕರಣವಾದ ಮತ್ತು ನಕ್ಸಲವಾದದ ವಿರುದ್ಧ ಧೀರ ಹೋರಾಟ ನಡೆಸಿದ ಕಾಂ| ಪ್ರಮೋದ್ ಎಡರಂಗವನ್ನು ಕಟ್ಟಿ ಬೆಳೆಸಿದ್ದರು ಎಂದು ರಾಜ್ಯ ಸಮಿತಿ ತಿಳಿಸಿದೆ.

ಕಾಂ| ಪ್ರಮೋದ್ ದಾಸ್ ಗುಪ್ತಾ ತಮ್ಮ ಜೀವನದುದ್ದಕ್ಕೂ ಶ್ರಮಿಸಿದ್ದ ಆದರ್ಶಗಳನ್ನು ಸಾಕಾರಗೊಳಿಸುವ ದೃಢ ಪ್ರತಿಜ್ಞೆಯನ್ನು ಸಿ. ಪಿ. ಐ. (ಎಂ) ರಾಜ್ಯ ಸಮಿತಿ ಮಾಡುತ್ತದೆ ಎಂದು ಪ್ರಕಟನೆ ತಿಳಿಸಿದೆ.

ಭಾನುವಾರ ಕಲ್ಕತ್ತೆಯಲ್ಲಿ ನಡೆಯಲಿರುವ ಅಂತಿಮ ಕ್ರಿಯೆಯಲ್ಲಿ ಭಾಗವಹಿಸಲು ಸಿ. ಪಿ. ಐ. (ಎಂ) ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಕಾಂ| ಎನ್. ಕೆ. ಉಪಾಧ್ಯಾಯ ಅವರು ಕಲ್ಕತ್ತೆಗೆ ತೆರಳಿದ್ದಾರೆ.

ನೆ ರೆ ಹೊ ರೆ

ಒರಿಸ್ಸಾದಲ್ಲಿ ಅಭಾವಸ್ಥಿತಿ :
ಪರಿಹಾರಕ್ಕೆ ಒತ್ತಾಯಿಸಿ ೨೦ ಸಹಸ್ರ ಜನರ ಪ್ರದರ್ಶನ

ಬಿರುಗಾಳಿ, ಪ್ರವಾಹ ಹಾಗೂ ಅನಾವೃಷ್ಟಿ ಇವೆಲ್ಲವನ್ನೂ ಒಂದೇ ವರುಷದಲ್ಲಿ ಎದುರಿಸಬೇಕಾಗಿ ಬಂದ ಒರಿಸ್ಸಾದ ಬಹುಭಾಗ ಅಭಾವ ಸ್ಥಿತಿ ಎದುರಿಸುತ್ತಿದೆ; ರಾಜ್ಯದ ಆರ್ಥಿಕಸ್ಥಿತಿ ತೀರಾ ಹದಗೆಡುವಂತಾಗಿದೆ. ಇಂತಹ ಭಯಾನಕ ಪರಿಸ್ಥಿತಿಯಲ್ಲಿಯೂ ರಾಜ್ಯದ ಆಳುವ ಪಕ್ಷ ಜನತೆಯ ಸಂಕಷ್ಟಗಳ ಬಗ್ಗೆ ತೀವ್ರ ಅಸಡ್ಡೆಯಿಂದ ವರ್ತಿಸುತ್ತಿದೆ. ಸರಕಾರದ ಭ್ರಷ್ಟಾಚಾರ ಹಾಗೂ ಅದಕ್ಷತೆ ಜನತೆಯ ತೊಂದರೆಗಳನ್ನು ಇಮ್ಮಡಿಗೊಳಿಸಿವೆ. ಸರಕಾರದ ಈ ಬೇಜವಾಬ್ದಾರಿತನವನ್ನು ವಿರೋಧಿಸಿದ ಜನರ ಮೇಲೆ ಪೋಲೀಸರ ಅತ್ಯಾಚಾರಗಳು ಬೇರೆ.

ತೊಂದರೆಗೀಡಾದ ಜನತೆಗೆ ಪರಿಹಾರ ನೀಡಲು ರಾಜ್ಯದ ಹಲವೆಡೆ ಪರಿಹಾರ ಕೇಂದ್ರಗಳನ್ನು ಸಂಘಟಿಸಿದ ಸಿ.ಪಿ.ಐ. (ಎಂ) ಇದರ ಜೊತೆಗೇ ರಾಜ್ಯದ ರಾಜಧಾನಿಯಲ್ಲಿ ಭಾರಿ ಮತಪ್ರದರ್ಶನ ನಡೆಸಲು ಕರೆ ಕೊಟ್ಟಿತ್ತು. ಈ ಕರೆಗೆ ಓಗೊಟ್ಟು ಅಕ್ಟೋಬರ್ 20 ರಂದು ಭುವನೇಶ್ವರದಲ್ಲಿ ಸಚಿವಾಲಯದ ಎದುರು ಇಪ್ಪತ್ತು ಸಾವಿರಕ್ಕೂ ಹೆಚ್ಚು ಜನ ಭಾರೀ ಮತಪ್ರದರ್ಶನ ನಡೆಸಿ ಅಸಡ್ಡೆಯಿಂದಿದ ಸರಕಾರಕ್ಕೆ ತೀವ್ರ ಎಚ್ಚರಿಕೆ ನೀಡಿದರು. ಇದಕ್ಕೆ ಮೊದಲು ಸಿ.ಪಿ.ಐ. (ಎಂ)ನ ಪ್ರತಿನಿಧಿ ಮಂಡಲವೊಂದು ಮುಖ್ಯ ಮಂತ್ರಿಗಳನ್ನು ಭೇಟಿಯಾಗಿತ್ತು.

ರಾಜ್ಯದ ಈ ಪರಿಸ್ಥಿತಿಯ ಬಗ್ಗೆ ಕೇಂದ್ರದ ಸರಕಾರಕ್ಕೆ ಸರಿಯಾದ ಮಾಹಿತಿ ನೀಡಲು ರಾಜ್ಯದ ವಿರೋಧ ಪಕ್ಷಗಳ ನಾಯಕರ ತಂಡವೊಂದು ಪ್ರಧಾನ ಮಂತ್ರಿ, ಕೇಂದ್ರದ ಆಹಾರ ಮಂತ್ರಿ ಹಾಗೂ ಹಣಕಾಸು ಮಂತ್ರಿಯವರನ್ನೂ ಭೇಟಿ ಮಾಡಿತು.

ಅಂತೋಣಿಯವರ
"ತೀವ್ರಗಾಮಿ ಯುವಕ"ರ ಅಂಗಡಿ ಮುಚ್ಚಿತು!

ಕೇರಳದ ಅಂತೋಣಿ ಹಾಗೂ ಅವರ ಕಾಂಗ್ರೆಸ್ಸಿನ ಸಹಯೋಗಿಗಳು ತಮ್ಮ ಮೂಲ "ಮನೆ"ಗೆ ವಾಪಸು ಬರಲು ಈಗ ಯಾವ ಅಡ್ಡಿಯೂ ಇಲ್ಲ. ಬಹಳ ಅದೃಷ್ಟವಂತರು ಅವರು. ಯಾಕೆಂದರೆ ಚವಾಣ್ ಇತ್ಯಾದಿಗಳಂತೆ 'ಪಾಪ ಕಳೆದುಕೊಳ್ಳುವ'ವರೆಗೆ ಕಾಯಬೇಕಾಗಿ ಬರಲಿಲ್ಲ. ಅಂತೋಣಿ ಕಾಂಗ್ರೆಸ್ಸು ಮತ್ತೆ ಕಾಂಗ್ರೆಸ್‌ನೊಡನೆ ಸೇರಲು ಅವರು ಒಡ್ಡಿದ್ದು ಕೇವಲ ಒಂದೇ ಶರತ್ತು. ಕೇರಳ ವಿಧಾನ ಸಭೆಯಲ್ಲಿ ಆ್ಯಂಗ್ಲೋ-ಇಂಡಿಯನ್ ಸೀಟಿಗೆ ತನ್ನ ಹಿಂಬಾಲಕ ಸ್ಟೀಫನ್ ಪಡುವಾ ರವರು ಅಭ್ಯರ್ಥಿಯಾಗಬೇಕೆಂಬುದು. ಇದಕ್ಕೆ "ಮನೆಯೊಡೆಯ" ಕರುಣಾಕರನ್ ರವರ ಸ್ವೀಕೃತಿ ದೊರೆತಿದೆ. ಅಂತೋಣಿ ಹಾಗೂ ಅವರ ಬೆಂಬಲಿಗರಿಗೆ ಬೇರೆ ಶರತ್ತುಗಳು ತೋಚಲಿಲ್ಲವೆಂದೇನೂ ಅಲ್ಲ. ಆದರೆ ಅಂತಹ ಶರತ್ತುಗಳನ್ನು ಏಕದಂ ತಿರಸ್ಕರಿಸಲಾಗುವುದು ಎಂಬ ಸೂಚನೆ ಮೊದಲೇ ಅವರಿಗೆ ಇತ್ತು.

ಹಳೆಯ ಅವಿಭಜಿತ ಕಾಂಗ್ರೆಸ್ ಕಾಂಗ್ರೆಸ್ (ಓ) ಹಾಗೂ ಕಾಂಗ್ರೆಸ್ (ಆರ್) ಆಗಿ ಒಡೆದಾಗ ಅಂತೋಣಿಯವರು ಅಖಿಲ ಭಾರತ ರಾಜಕೀಯದಲ್ಲಿ ಪ್ರಧಾನ ಮಂತ್ರಿಗಳ ನಿಷ್ಠ ಹಿಂಬಾಲಕರಾದರೆ ರಾಜ್ಯದಲ್ಲಿ ಕರುಣಾಕರನ್ ನಾಯಕತ್ವ ವಿರೋಧಿಸುವ "ತೀವ್ರಗಾಮಿ ಯುವಕ"ರ ನಾಯಕರಾದರು. ಗೌಹಾತಿಯಲ್ಲಿ ನಡೆದ ಎ.ಐ.ಸಿ.ಸಿ.ಯಲ್ಲಿ ತುರ್ತು ಪರಿಸ್ಥಿತಿ ವಿರುದ್ಧ ಮಾತನಾಡಿ ಅಖಿಲ ಭಾರತ ಗಮನ ಸೆಳೆದರು. ಪ್ರಧಾನ ಮಂತ್ರಿಯಿಂದ ಬೇರೆಯಾಗಿ ತಮ್ಮದೇ ಕಾಂಗ್ರೆಸ್ ರಚಿಸಿಕೊಂಡ ಚವಾಣ್, ಸ್ವರಣ್‌ಸಿಂಗ್, ಇತ್ಯಾದಿಯವರೊಡನೆ ಇವರೂ ಸೇರಿಕೊಂಡರು. ಈ ನಾಯಕರು ಕಾಂಗ್ರೆಸ್ (ಐ) ನೊಂದಿಗೆ ಒಪ್ಪಂದ ಮಾಡಿಕೊಂಡಾಗ ಪ್ರತಿಭಟನೆಯಾಗಿ ಕೇರಳದ ಮುಖ್ಯ ಮಂತ್ರಿತ್ವ ತ್ಯಜಿಸಿದರು. ಸ್ವರಣ್‌ಸಿಂಗ್ ಇತ್ಯಾದಿಯಾಗಿ ತಮ್ಮ ಮೂಲ "ಮನೆ"ಗೆ ವಾಪಸಾಗುವಾಗ ಸಿ. ಪಿ. ಐ. (ಎಂ) ಹಾಗೂ ಇತರ ಎಡಪಂಥೀಯರೊಡನೆ ಸೇರಿಕೊಂಡು ಕಾಂಗ್ರೆಸ್ (ಐ) ನ್ನು ಸೋಲಿಸಿ ಕೇರಳದಲ್ಲಿ ಎಡ ಒಲವಿನ ಸರಕಾರ ರಚಿಸಲು ಸಹಾಯ ನೀಡಿದರು. ಇಷ್ಟೆಲ್ಲಾ ಮಾಡಿದ ಮೇಲೆ ಇತರ ರಾಜ್ಯಗಳ ಸಹಯೋಗಿಗಳಂತೆ ನೇರವಾಗಿ ಕಾಂಗ್ರೆಸ್ (ಐ) ಸೇರುವುದು ಇವರಿಗೆ ಬಹಳ ಪ್ರಯಾಸದ ಕೆಲಸವೇ ಆಗಿತ್ತು.

ಈ ಪ್ರಯಾಸದ ಕೆಲಸದ ಮೊದಲ ಹಂತವಾಗಿ ಎಡ-ಪ್ರಜಾಪ್ರಭುತ್ವರಂಗದ ಸರಕಾರವನ್ನು ಉರುಳಿಸಿದ ಮೇಲೂ ಸುಮಾರು ಒಂದು ವರ್ಷಕಾಲ ಪ್ರತ್ಯೇಕ ಅಸ್ತಿತ್ವ ಉಳಿಸಿಕೊಂಡು ತಮ್ಮದೇ "ನಿಜವಾದ ಕಾಂಗ್ರೆಸ್" ಎಂದು ಹೇಳಿಕೊಂಡು ವಾಸ್ತವವಾಗಿ ಕಾಂಗ್ರೆಸ್ (ಐ) ನೊಳಗೆ "ಮರ್ಯಾದೆಯ ಸ್ಥಾನ" ಗಳಿಸಿಕೊಳ್ಳಲು ಪ್ರಯತ್ನಿಸಿದರು. ಆದರೆ ಅವರ ಪ್ರಯತ್ನ ವಿಫಲವಾಗಿದೆ. ಈಗ ಅವರು ಕರುಣಾಕರನ್‌ರ ಕಾಂಗ್ರೆಸ್ (ಐ) ಗೆ ಸಂಪೂರ್ಣ ಶರಣಾಗತಿಯಾದಂತೆಯೇ. ಕರುಣಾಕರನ್‌ರ "ಪ್ರತಿಕ್ರಿಯಾವಾದೀ ನಾಯಕತ್ವ"ವನ್ನು ವಿರೋಧಿಸುತ್ತೇವೆಂದು ಹೇಳಿಕೊಳ್ಳುತ್ತಿದ್ದ ಅವರ "ತೀವ್ರಗಾಮಿ ಯುವಕ"ರ ಅಂಗಡಿಗೆ ಕೊನೆಗೂ ಬಾಗಿಲೆಳೆಯಲಾಯಿತು. ಈಗಾಗಲೇ ಹಲವು ಗುಂಪುಗಳಿರುವ ಕಾಂಗ್ರೆಸ್ (ಐ) ನಲ್ಲಿ ಇನ್ನೊಂದು ಗುಂಪು ಹುಟ್ಟಿದಂತಾಗಿದೆ ಈಗ.

ಪಂಜಾಬ್ :
ರಸ್ತೆ ಸಾರಿಗೆ ಕಾರ್ಮಿಕರು ಹೋರಾಟದ ಹಾದಿಯಲ್ಲಿ

ಲಖಿಧಿಯಾನಾ ಡಿಪೋದ ಕಾರ್ಮಿಕರು ನವೆಂಬರ್ 12 ರಂದು ಪಂಜಾಬ್ ರೋಡ್‌ವೇಸ್ ಹಾಗೂ ಪೆಪ್ಸು ರಸ್ತೆ ಸಾರಿಗೆ ಕಾರ್ಪೋರೇಷನ್‌ನ ಕಾರ್ಮಿಕರ ಸಮಾವೇಶ ಏರ್ಪಡಿಸಿದ್ದರು. ಇದರಲ್ಲಿ 500 ಪ್ರತಿನಿಧಿಗಳು ಭಾಗವಹಿಸಬೇಕಿತ್ತು. ಆದರೆ ನಿಜವಾಗಿ ಭಾಗವಹಿಸಿದ್ದು 700 ಪ್ರತಿನಿಧಿಗಳು. ಪಂಜಾಬಿನಲ್ಲಿ ಕಾರ್ಮಿಕರಲ್ಲಿ ಸಿ.ಐ.ಟಿ ಯು.ನ ಪ್ರಭಾವ ಬೆಳೆಯುತ್ತಿರುವುದರ ದ್ಯೋತಕ ಇದು, ಸಮಾವೇಶದಲ್ಲಿ ಬೇಡಿಕೆಗಳ ಕರಡಿನ ಬಗ್ಗೆ ಚರ್ಚೆ ನಡೆಯಿತು. ಪ್ರತಿನಿಧಿಗಳು ಸರಕಾರವೇ ಸ್ವತಃ ಸಾರಿಗೆ ಕಾನೂನುಗಳನ್ನು ಮುರಿಯುತ್ತಿರುವುದರ ಬಗ್ಗೆ, ಭ್ರಷ್ಟಾಚಾರದ ಬಗ್ಗೆ, ಕಾರ್ಮಿಕರ ಅನಾನುಕೂಲತೆಗಳ ಬಗ್ಗೆ ವಿವರ ನೀಡಿದರು. ಜಂಟೀ ಹೋರಾಟ ನಡೆಸಲು ಸಮನ್ವಯ ಸಮಿತಿ ರಚಿಸಿ ಡಿಸೆಂಬರ್ 29 ರಂದು "ಬೇಡಿಕೆ ದಿನ" ಆಚರಿಸಲು ನಿರ್ಧರಿಸಲಾಯಿತು. ಚರ್ಚೆಯನ್ನು ಕೊನೆಗೊಳಿಸುತ್ತಾ ಮಾತನಾಡಿದ ಸಿ. ಐ. ಟಿ ಯು.ನ ಕಾರ್ಯದರ್ಶಿ ನೃಸಿಂಗ ಚಕ್ರವರ್ತಿಯವರು, ಜನತೆಯ ಸಹಾನುಭೂತಿಗಳಿಸುವ ಅಗತ್ಯದ ಬಗ್ಗೆ ವಿವರಿಸಿ, ಅದಕ್ಕಾಗಿ ಭ್ರಷ್ಟಾಚಾರದ ಎಲ್ಲಾ ಅಂಶಗಳನ್ನು ಬಯಲಿಗೆಳೆದು ಆ ಮೂಲಕ ವ್ಯವಸ್ಥಾಪಕರ ಅದಕ್ಷತೆಗೆ ಜನತೆ ಕಾರ್ಮಿಕರನ್ನು ಜವಾಬ್ದಾರರನ್ನಾಗಿ ಮಾಡದಂತೆ ನೋಡಿಕೊಳ್ಳಬೇಕೆಂದು ಹೇಳಿದರು.

ಬಿಹಾರದಲ್ಲಿ :
ಎ.ಕೆ.ಜಿ. ಸ್ಮಾರಕ ಕಾಲೇಜು

ಭಾಗಲ್ಪುರ ಜಿಲ್ಲೆಯ ಸುಲ್ತಾನ್‌ಗಂಜ್ ಗಂಗಾತೀರದಲ್ಲಿರುವ ಸಣ್ಣ ಪಟ್ಟಣ. ಇಲ್ಲಿ ಅಧ್ಯಾಪಕರು, ಯುವಕರು, ಕಾರ್ಮಿಕರು ಹಾಗೂ ರೈತರು ಸೇರಿದ ಒಂದು ಗುಂಪು 1980ರ ಜನವರಿಯಿಂದ ಧನ ಸಂಗ್ರಹಿಸಿ ಸ್ಥಳೀಯ ಶಾಲೆಯ ಕಟ್ಟಡವೊಂದರಲ್ಲಿ ಬೆಳಗ್ಗೆ 6 ರಿಂದ 11 ರವರೆಗೆ ಕಾಲೇಜಿನ ತರಗತಿ ನಡೆಸಲು ವ್ಯವಸ್ಥೆ ಮಾಡಿತ್ತು. ಈ ವರ್ಷ ಈ ಕಾಲೇಜಿನಿಂದ 134 ವಿದ್ಯಾರ್ಥಿಗಳು ಇಂಟರ್ ಪರೀಕ್ಷೆಗೆ ಕೂಡಿದ್ದು ಇತರ ಸ್ಥಳೀಯ ಕಾಲೇಜುಗಳ ಫಲಿತಾಂಶ 20% ಇದ್ದರೆ ಈ ಕಾಲೇಜಿನ ಫಲಿತಾಂಶ 56 6% ಬಂದಿತ್ತು. ಇದು ದೇಶದಲ್ಲಿ ಎ. ಕೆ. ಗೋಪಾಲನ್ ರವರ ಹೆಸರು ಹೊತ್ತ ಏಕೈಕ ಕಾಲೇಜು. ನವೆಂಬರ್ 7 ರಂದು ಅಖಿಲ ಭಾರತ ಜನವಾದೀ ಮಹಿಳಾ ಸಂಘದ ಪ್ರಧಾನ ಕಾರ್ಯದರ್ಶಿ ಸುಶೀಲಾ ಗೋಪಾಲನ್ ಈ ಕಾಲೇಜಿನ ಕಟ್ಟಡದ ಶಿಲಾನ್ಯಾಸ ನಡೆಸಿದರು. ಕಾಲೇಜಿನ ಆಡಳಿತ ಮಂಡಳಿಯ ಸದಸ್ಯರೂ. ಬಿಹಾರ ರಾಜ್ಯ ಡಿ. ವೈ. ಎಫ್.ಐ. ಅಧ್ಯಕ್ಷರೂ ಆದ ಅರ್ಜುನ್ ಪ್ರಸಾದ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಸಭೆಯನ್ನುದ್ದೇಶಿಸಿ ಮಾತನಾಡಿದ ಸುಶೀಲಾ ಗೋಪಾಲನ್‌ರವರು ಎ. ಕೆ. ಜಿ ಸ್ಮಾರಕ ಕಾಲೇಜನ್ನು ಒಂದು ಸಾಂಸ್ಕೃತಿಕ ಕೇಂದ್ರವಾಗಿ ಕಟ್ಟಿ ಸುಲ್ತಾನ್‌ಗಂಜ್ ಹಾಗೂ ಸುತ್ತಮುತ್ತಲ ಪ್ರದೇಶದ ಅಭಿವೃದ್ಧಿಯ ಕೇಂದ್ರವಾಗಿ ಬೆಳೆಸಬೇಕೆಂದು ಹೇಳಿದರು. ಎ. ಕೆ. ಜಿ. ಯವರು ತಮ್ಮ ಜೀವನಪರ್ಯಂತ ಶಿಕ್ಷಕರಾಗಿದ್ದರು ಮಾತ್ರವಲ್ಲ "ಹಳ್ಳಿಯ ಮಿತ್ರರೂ" ಆಗಿದ್ದರು; ವಿದ್ಯಾರ್ಥಿಗಳು ಹಾಗೂ ಅವರ ಕುಟುಂಬಗಳೊಡನೆ ನಿಕಟ ಸಂಪರ್ಕವಿಟ್ಟುಕೊಂಡು ಅವರ ಶಿಕ್ಷಣಾಭ್ಯುದಯ ಮಾತ್ರವಲ್ಲ ಸಾಮಾಜಿಕ ಹಾಗೂ ರಾಜಕೀಯ ಜೀವನಕ್ಕೂ ಮಾರ್ಗದರ್ಶನ ನೀಡುತ್ತಿದ್ದರು.

ಪತ್ರಿಕಾ ವಿರೋಧಿ ಮಸೂದೆಯ ವಿರುದ್ಧ ಹೋರಾಟಗಳ ಮೂಲಕ ಮತ್ತೊಮ್ಮೆ ಸರ್ವಾಧಿಕಾರ ವಿರೋಧೀ ಹೋರಾಟದ ಕೇಂದ್ರವಾಗುತ್ತಿರುವ ಬಿಹಾರದಲ್ಲಿ ಜನತೆಯ ಹಕ್ಕುಗಳಿಗಾಗಿ ಹೋರಾಡಿದ ಮಹಾನ್ ಹೋರಾಟಗಾರ ಎ. ಕೆ. ಜಿ. ಯ ಸ್ಮಾರಕವಾಗಿ ಕಾಲೇಜು ಸ್ಥಾಪಿತವಾಗುತ್ತಿರುವುದು ಕೇವಲ ಆಕಸ್ಮಿಕವಲ್ಲ ಎಂದು ಡಿ.ವೈ. ಎಫ್.ಐ.ನ ಖಜಾಂಚಿ ಸುನೀತ್ ಚೋಪ್ರಾ ಹೇಳಿದರು.

ಎ.ಐ.ಎ.ಡಿ.ಎಂ.ಕೆ. ಸರಕಾರದ
ಕಾರ್ಮಿಕ ವಿರೋಧೀ ಧೋರಣೆ ಮತ್ತಷ್ಟು ಬಯಲಾಗಿದೆ!

ತಮಿಳುನಾಡಿನ ಕಾರ್ಮಿಕ ಮಂತ್ರಿ ಹೋದೆಡೆಯಲ್ಲಾ ತನ್ನ ಸರಕಾರ ವಿವಾದ ಪರಿಹಾರಕ್ಕಾಗಿ ಮಾತುಕತೆಗೆ ಯಾವಾಗಲೂ ತಯಾರು ಎಂದು ಜಂಭ ಕೊಚ್ಚಲು ಮರೆಯುವುದಿಲ್ಲ. ಆದರೆ ತಮಿಳುನಾಡಿನ ಹಲವು ಕೈಗಾರಿಕೆಗಳಲ್ಲಿ ನಡೆಯುತ್ತಿರುವ ಬೋನಸ್ ಹೋರಾಟಗಳು ಅವರದು ಕೇವಲ ಜೊಳ್ಳು ಮಾತುಗಳು ಎಂಬುದನ್ನು ಎಲ್ಲರಿಗೂ ಸ್ಪಷ್ಟಪಡಿಸಿದೆ. ಕೇಂದ್ರ ಸರಕಾರದ ಉದ್ಯಮವಾದ ನೈವೇಲಿ ಲಿಗ್ನೈಟ್ ಕಾರ್ಪೊರೇಷನ್‌ನಲ್ಲಿನ ಮುಷ್ಕರ ಇದಕ್ಕೆ ಮತ್ತೊಂದು ಉದಾಹರಣೆ.

ನೈವೇಲಿ ಲಿಗ್ನೈಟ್ ಕಾರ್ಪೊರೇಶನ್ ಕಳೆದ ವರ್ಷ 38 ಕೋಟಿ ರೂ. ಲಾಭ ಗಳಿಸಿತ್ತು. ಇದರಿಂದಾಗಿ ಸಿ.ಐ ಟಿ. ಯು., ಎ.ಐ.ಟಿ.ಯು.ಸಿ , ಡಿ.ಎಂ. ಕೆ., ಇಂಟಕ್, ಜನತಾ ಹಾಗೂ ಎ.ಐ. ಎ.ಡಿ ಎಂ.ಕೆ. ಮತ್ತು ನೌಕರರ ಸಂಘಗಳು ಸೇರಿದ ಜಂಟೀ ಕ್ರಿಯಾ ಸಮಿತಿ 20% ಬೋನಸ್ ಹಾಗೂ 1000 ರೂ.ಗೆ ಬೇಡಿಕೆ ಸಲ್ಲಿಸಿತ್ತು. ಆದರೆ ಆಡಳಿತ ವರ್ಗ ಉತ್ಪಾದಕತೆಗೆ ಜೋಡಿಸಿದ ಬೋನಸ್ ಮಾತ್ರ ಕೊಡುವುದಾಗಿ ಹೇಳಿತು. ಸಿ. ಐ. ಟಿ. ಯು. ಹಾಗೂ ಎ.ಐ.ಟಿ ಯು.ಸಿ ಯೂನಿಯನ್‌ಗಳನ್ನು ಬಿಟ್ಟು ಉಳಿದೆಲ್ಲಾ ಸಂಘಗಳು ಇದಕ್ಕೆ ಸಮ್ಮತಿಸಿದವು. ಆದರೆ ಬೋನಸ್‌ನ ಪ್ರಮಾಣ ಹೆಚ್ಚಿಸಬೇಕೆಂದು ಕೇಳಿದವು. ಸಿ.ಐ.ಟಿ.ಯು. ಹಾಗೂ ಎ ಐ ಟಿ ಯು. ಸಿ. ಸಂಘಗಳನ್ನು ಜಂಟಿ ಕ್ರಿಯಾ ಸಮಿತಿಯಿಂದ ಹೊರಗಿಡಲಾಯಿತು ಆದರೆ ಈ ಸಂಘಗಳ ಬೇಡಿಕೆಯನ್ನೂ ಆಡಳಿತವರ್ಗ ಮನ್ನಿಸಲಿಲ್ಲ. ಪರಿಣಾಮವಾಗಿ ಕ್ರಿಯಾ ಸಮಿತಿ ಅಕ್ಟೋಬರ್ 27 ರಂದು ಕಾರ್ಪೊರೇಷನ್‌ನ 17 ಸಾವಿರ ಕಾರ್ಮಿಕರಿಗೆ ಮುಷ್ಕರಕ್ಕೆ ಕರೆ ಕೊಟ್ಟಿತು. ಸಿ.ಐ.ಟಿ.ಯು ; ಎ.ಐ ಟಿ.ಯು.ಸಿ. ಸಂಘಗಳೂ ಇದಕ್ಕೆ ಬೆಂಬಲ ನೀಡಿದವು. ಪೋಲೀಸ್, ಜಿಲ್ಲಾ ಕಲೆಕ್ಟರ್ ಹಾಗೂ ಇತರ ಉಪಾಯಗಳ ಮೂಲಕ ಮುಷ್ಕರ ಮುರಿಯಲು ಸರಕಾರ ಪ್ರಯತ್ನಿಸಿತು. ಅಪಪ್ರಚಾರ ಭರದಿಂದ ನಡೆಯಿತು. ಆಳುವ ಪಕ್ಷ ತನ್ನ ಕಾರ್ಮಿಕ ಸಂಘ ಮುಷ್ಕರ ಹಿಂತೆಗೆದುಕೊಳ್ಳಬೇಕೆಂದು ಆದೇಶ ನೀಡಿತು. ಆದರೆ ಕಾರ್ಮಿಕರು ಜಂಟಿ ಕ್ರಿಯಾ ಸಮಿತಿಗೆ ನೈವೇಲಿಯಲ್ಲಿ ಮುಷ್ಕರ ವಾಪಾಸು ಪಡೆಯಲು ಅವಕಾಶ ಕೊಡಲಿಲ್ಲ. ಆದ್ದರಿಂದ ಈ ಸಮಿತಿಯ ನಾಯಕರು ಮದ್ರಾಸಿನಿಂದ ನವೆಂಬರ್ 5 ರಂದು ಮುಷ್ಕರ ವಾಪಸು ಪಡೆಯಲಾಗಿದೆಯೆಂದು ಹೇಳಿಕೆ ನೀಡಿದರು. ತಕ್ಷಣ ಎ.ಐ.ಎ.ಡಿ.ಎಂ.ಕೆ. ಸಂಘ ವಿಸರ್ಜನೆಗೊಂಡಿತು. ಮಾತುಕತೆಯಲ್ಲಿ "ಕಮ್ಯುನಿಸ್ಟ್ ಸಂಘಗಳಿಗೆ" ಅವಕಾಶವಿರದಂತೆ ನೋಡಿಕೊಂಡ ಕಾರ್ಮಿಕ ಮಂತ್ರಿಯವರೊಡನೆ ಜಂಟಿ ಕ್ರಿಯಾ ಸಮಿತಿ ನಾಯಕರು ಉತ್ಪಾದನೆ ಸಂಬಂಧಿತ ಬೋನಸ್‌ಗೆ ಸಹಿ ಹಾಕಿದರು. ಸಿ.ಐ ಟಿ.ಯು. ಹಾಗೂ ಎ.ಐ.ಟಿ.ಯು ಸಿ. ಸಂಘಗಳು ಮಾತ್ರ ಇದಕ್ಕೆ ಸಹಿ ಹಾಕಲಿಲ್ಲ.

(7 ನೇ ಪುಟ ನೋಡಿ)

ಚುನಾವಣಾ ರಂಗ.

ಚುನಾವಣೆ ಬಂತು – ನಮ್ಮ ಕರ್ತವ್ಯ ಮಾಡೋಣ

–ಎನ್. ಕೆ. ಉಪಾಧ್ಯಾಯ

ಕರ್ನಾಟಕ ರಾಜ್ಯದ ಏಳನೇ ವಿಧಾನ ಸಭೆಯ ಚುನಾವಣೆ ಜನವರಿ 5, 1983 ರಂದು ನಡೆಯುತ್ತದೆಂಬ ಪ್ರಕಟಣೆ ಅಧಿಕೃತವಾಗಿ ವರ್ತಮಾನ ಪತ್ರಿಕೆಗಳ ಮೂಲಕ ಜನರಿಗೆ ತಿಳಿಯುವ 48 ಗಂಟೆಗಳ ಮುಂಚೆ ಕರ್ನಾಟಕ ಮತ್ತು ಆಂಧ್ರದ ಮುಖ್ಯ ಮಂತ್ರಿದ್ವಯರು ಆಂಧ್ರ–ಕರ್ನಾಟಕ ರಾಜ್ಯಗಳ ಚುನಾವಣೆ ಮುಂದಿನ ವರ್ಷ ಫೆಬ್ರವರಿ ತಿಂಗಳಲ್ಲೇ ನಡೆಯುವುದು ಖಂಡಿತವೆಂಬ ಆತ್ಮವಿಶ್ವಾಸವನ್ನು ಬಹಿರಂಗವಾಗಿಯೂ, ಗುಂಡೂರಾಯರು ಕಾಂಗ್ರೆಸ್ ವಿಧಾನ ಸಭಾ ಸದಸ್ಯರ ಸಭೆಯಲ್ಲೂ ಪ್ರಕಟಮಾಡಿದ್ದರು. ಅಕ್ಟೋಬರ್ ತಿಂಗಳಲ್ಲಿ ನಡೆದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಂದರ್ಭದಲ್ಲಿ ಜನವರಿ ಮೊದಲ ವಾರದಲ್ಲಿ ಸೇರಲಿದ್ದ ವಿಶ್ವ ಕನ್ನಡ ಪರಿಷತ್ತಿನಿಂದಾಗಿ ಹೆಚ್ಚು ಮತಗಳಿಸಲು ಅನುಕೂಲವಾಗಬಹುದಾದುದರಿಂದ, ಜನವರಿ 83ರಲ್ಲೇ ಚುನಾವಣೆ ನಡೆಸಬೇಕೆಂಬ ವಿಚಾರ ಕೇಂದ್ರಕ್ಕಿದ್ದರೂ ಕೂಡ ಫೆಬ್ರವರಿಯಲ್ಲೇ ಚುನಾವಣೆ ನಡೆಯಬೇಕೆಂದು ಗುಂಡೂರಾಯರು ಇಂದಿರಾ ಗಾಂಧಿಯವರಿಗೆ ಮನದಟ್ಟು ಮಾಡಿದ್ದಾರೆಂದೂ ತಿಳಿದ ಮೂಲಗಳಿಂದ ನಮಗೆ ಗೊತ್ತಾಗಿತ್ತು. ಆಂಧ್ರ ಮತ್ತು ಕರ್ನಾಟಕದಲ್ಲಿ ವಿರೋಧ ಪಕ್ಷಗಳು ಮುಂಬರುವ ಚುನಾವಣೆಯಲ್ಲಿ ಐಕ್ಯತೆಯಿಂದ ಸ್ಪರ್ಧಿಸಬೇಕೆಂಬ ಗಂಭೀರ ಪ್ರಯತ್ನ ನಡೆಸುತ್ತಿದ್ದಾಗ, ಕರ್ನಾಟಕದಲ್ಲಿ ಬಂಗಾರಪ್ಪ, ಆಂಧ್ರದಲ್ಲಿ ಸಿನೆಮಾ ನಟ ಎನ್. ಟಿ. ರಾಮರಾವ್ ಕಾಂಗ್ರೆಗೆ ಪ್ರಬಲ ವಿರೋಧಿ ಶಕ್ತಿಗಳಾಗಬಹುದೆಂಬ ಸಂಶಯದಿಂದ ಅವರೆಲ್ಲ ತಮ್ಮ ಶಕ್ತಿಯನ್ನು ಭದ್ರಗೊಳಿಸುವ ಮುಂಚೆಯೇ ಚುನಾವಣೆ ನಡೆಸುವ ವಿಚಾರ ಕಳೆದ ನಾಲ್ಕೈದು ತಿಂಗಳಿಂದಲೂ ಇಂದಿರಾ ಗಾಂಧಿಗಿತ್ತೆಂಬ ಸಂಗತಿ ಇದರಿಂದ ಸ್ಪಷ್ಟವಾಗುತ್ತದೆ. ಆದ್ದರಿಂದಲೇ ಜನವರಿಯಲ್ಲೇ ಚುನಾವಣೆ ನಡೆಯಬಹುದೆಂಬ ಅಭಿಪ್ರಾಯಗಳನ್ನು ವಿರೋಧ ಪಕ್ಷಗಳು ವ್ಯಕ್ತಮಾಡುತ್ತಲೇ ಬಂದಿದ್ದವು.

ಜನವರಿಯಲ್ಲಿ ಚುನಾವಣೆಯಾಗುತ್ತದೆಂಬ ವಿಷಯ ಆಂಧ್ರದ ಮುಖ್ಯಮಂತ್ರಿಯವರಿಗೆ ಸ್ಪಷ್ಟವಾಗಿ ತಿಳಿದಿತ್ತೆಂಬುದಕ್ಕೆ ಅವರ ಹೇಳಿಕೆಯೇ ಸಾಕ್ಷಿಯಾಗಿದೆ. ಜನವರಿ 5 ರಂದು ಚುನಾವಣೆಯಾಗುತ್ತದೆಂಬ ಸುದ್ದಿ ಪ್ರಕಟವಾದ ಕೂಡಲೇ ಆಂಧ್ರ ಮುಖ್ಯಮಂತ್ರಿಯವರ ಪ್ರತಿಕ್ರಿಯೆ ಏನೆಂದು ಪತ್ರಿಕಾಕರ್ತರು ವಿಚಾರಿಸಿದಾಗ, "ಫೆಬ್ರವರಿ ತಿಂಗಳಲ್ಲಿ ಲೋಕ ಸಭೆಯ ಬಜೆಟ್ ಅಧಿವೇಶನ ನಡೆಯುತ್ತಿರುವುದರಿಂದ ಜನವರಿ ತಿಂಗಳಲ್ಲೇ ಚುನಾವಣೆ ನಡೆಯುವುದರಲ್ಲಿ ತಪ್ಪೇನಿಲ್ಲ" ಎಂಬ ಅಭಿಪ್ರಾಯವನ್ನು ವ್ಯಕ್ತಮಾಡಿದ್ದರೆ, ನಮ್ಮ ರಾಜ್ಯದ ಮುಖ್ಯ ಮಂತ್ರಿ ಗುಂಡೂರಾಯರು ಮಾತ್ರ ಆಕಸ್ಮಾತ್ತಾಗಿ ಮೇಲಿಂದ ಬಿದ್ದ ಆಟಂ ಬಾಂಬಿನಿಂದುಂಟಾಗುವ ಪರಿಣಾಮಗಳ ಮಾನಸಿಕ ಪರಿಸ್ಥಿತಿ ಹೊಂದಿದವರಾಗಿದ್ದಾರೆ.

ಚುನಾವಣೆಯ ದಿನಾಂಕವನ್ನು ಆಕಾಶವಾಣಿ ಬಿತ್ತರಿಸುತ್ತಿರುವಾಗ ತಮ್ಮ ಐದು ವರ್ಷ ವಿಧಾನ ಸಭೆಯ ಸದಸ್ಯತ್ವದ ಕೊನೆಯ "ವಿದಾಯ" ಆನಂದೊತ್ಸವದಲ್ಲಿ ತಲ್ಲೀನರಾಗಿದ್ದರು ಎಲ್ಲ ಶಾಸಕರು. "ಯಾರ್ಯಾರ್ಗೆ ಟಿಕೇಟು ಸುವ್ವಲಾಲಿ. ಗುಂಡೂರಾಯ್ರು ಕೊಟ್ರೋರ್ಗೆ ಸುವ್ವಲಾಲಿ" "ನೊಯ್ಲ್ಲ ಕೈಲಿ ಥೈಲಿ ನೋಡು ಸುವ್ವಲಾಲಿ ಗಡಿಬಿಡಿ ಶಂಕರರಾಯ್ರು ಸುವ್ವಲಾಲಿ''. "ಸುವ್ವಿ ಸುವ್ವಮ್ಮಲಾಲಿ, ಸುವ್ವಲಾಲಿ''ಎಂದು ಹಾಡುತ್ತ ಜಾನಪದ ಗುಣಗಳ ಗಾನದ ಏರಿಳಿತದಲ್ಲಿ ತಲ್ಲಿನರಾಗಿದ್ದ ಶಾಸಕರುಗಳಿಗೆಲ್ಲ ಇಂದಿರಾ ಗಾಂಧಿಯ ಚುನಾವಣಾ ನಿರ್ಣಯ ಆಘಾತ ಉಂಟುಮಾಡಿರಬೇಕೆಂಬುದರಲ್ಲಿ ಸಂಶಯವಿಲ್ಲ. ಬರೇ ಗುಂಡೂರಾಯರಷ್ಟೇ ಅಲ್ಲ ಗವರ್ನರರೂ ಕೂಡ ಈ "ವಿದಾಯ'' ಮೇಳದಲ್ಲಿ ಪಾಲ್ಗೊಂಡಿದ್ದಾಗಲೇ ಆಕಾಶವಾಣಿಯಲ್ಲಿ ಇಂದಿರಾ ನಿರ್ಧಾರ ಪ್ರಸಾರವಾಗುತ್ತಿರುವುದನ್ನು ನೋಡುವಾಗ, ಈ ನಿರ್ಧಾರದಲ್ಲಿ ಕರ್ನಾಟಕದ ಇಂದಿರಾ ಚೇಲರನ್ನೆಲ್ಲ ಸಂಪೂರ್ಣ ಕಡೆಗಣಿಸಲಾಗಿದೆಂಬ ವಿಷಯ ಬಹಳ ಮಹತ್ವದ್ದಾಗಿದೆ.

ಮತದಾರರ ಅನುಕೂಲತೆಗಾಗಿ ಕೆಲವು ತಿಂಗಳು ಮುಂಚಿತವಾಗಿಯೇ ಚುನಾವಣೆ ನಡೆಸಬೇಕೆಂದು ಪಶ್ಚಿಮ ಬಂಗಾಲದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಂಡತ್ವದ ಎಡರಂಗ ಸರಕಾರ ಕೇಂದ್ರ ಸರಕಾರ ಹಾಗೂ ಚುನಾವಣಾ ಕಮೀಶನನ್ನು ಕೇಳಿಕೊಂಡಾಗ ಅವರ ವಿನಂತಿಯನ್ನು ನಿರಾಕರಿಸಲಾಗಿತ್ತು. 1983 ಜನವರಿ ಎರಡನೇ ವಾರದಲ್ಲಿ ತ್ರಿಪುರಾದಲ್ಲಿರುವ ಸಿ.ಪಿ.ಐ. (ಎಂ) ಮುಖಂಡತ್ವದ ಎಡರಂಗ ಸರಕಾರದ ಅವಧಿ ಮುಗಿಯಲಿದ್ದು, ತಮ್ಮ ರಾಜ್ಯದ ಪರಿಸ್ಥಿತಿ ನೋಡಿ ಮತದಾರರಿಗೆ ಅನುಕೂಲವಾಗುವ ಸಲುವಾಗಿ 1982 ನವೆಂಬರ್ ತಿಂಗಳಲ್ಲೇ ಚುನಾವಣೆ ನಡೆಯಲೆಂದು ಕೇಂದ್ರಕ್ಕೆ ಸೂಚನೆ ಮಾಡಿದ್ದರೂ ಇಂದಿರಾ ಗಾಂಧಿ ಅದನ್ನು ಕಡೆಗಣಿಸಿದ್ದರು. ಆದರೆ ಈಗ 1983 ಮಾರ್ಚ್ 16 ರಂದು ಅವಧಿ ಮುಗಿಯುವ ಕರ್ನಾಟಕ ಮತ್ತು ಆಂಧ್ರ ರಾಜ್ಯಗಳಲ್ಲಿ ಎರಡು ತಿಂಗಳ ಮುಂಚಿತವಾಗಿಯೇ ಚುನಾವಣೆನಡೆಸುವನಿರ್ಧಾರಕ್ಕೆಗೊಂಡಿರುವುದರಲ್ಲಿ ರಾಜಕೀಯ ಒಳಗೊಂಡಿದೆಂಬುದರಲ್ಲಿ ಸಂಶಯವಿಲ್ಲ.

ಕಾಂಗ್ರೆ ಪಕ್ಷದೊಳಗಿರುವ ಆಂತರಿಕ ಜಗಳ-ಭಿನ್ನಾಭಿಪ್ರಾಯಗಳನ್ನು ತಡೆಹಿಡಿಯಲು ಅಸಮರ್ಥರಾದ ಇಂದಿರಾ ಗಾಂಧಿಯವರು 1982 ಮೇ ತಿಂಗಳಲ್ಲೇ ಕರ್ನಾಟಕ—ಆಂಧ್ರ ರಾಜ್ಯಗಳಲ್ಲಿ ವಿಧಾನ ಸಭೆ ಚುನಾವಣೆ ನಡೆಸಬೇಕೆಂಬ ಆತುರದಲ್ಲಿದ್ದರೆಂಬ ವಿಷಯ ಎಲ್ಲರಿಗೂ ಗೊತ್ತು. ಆಗ ಪ. ಬಂಗಾಲದ ಜೊತೆಯಲ್ಲಿ ಹರಿಯಾಣ-ಹಿಮಾಚಲ ಪ್ರದೇಶಗಳ ಚುನಾವಣೆಯಷ್ಟೇ ನಡೆಯಿತು.

ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಬಲಿಷ್ಠರಾಗಿರುವ ರಾಜ್ಯಗಳಲ್ಲಿ ಭವಿಷ್ಯಕಾರರ, ಧರ್ಮಾಧಿಕಾರಿಗಳ ಭವಿಷ್ಯ ನುಡಿಗಳು ಪರಿಣಾಮ ಬೀರದಿದ್ದರೂ ಕೂಡ, ತನ್ನ ಅಧಿಕಾರವನ್ನೆಲ್ಲ ಭವಿಷ್ಯಕಾರರಿಗೆ ಮುಡುಪಾಗಿಟ್ಟಿರುವ ಇಂದಿರಾ ಗಾಂಧಿಗೆ ಮಾತ್ರ ಭವಿಷ್ಯಕಾರರ ನುಡಿಯಲ್ಲಿ ಅತೀವ ವಿಶ್ವಾಸ ಇರುವುದರಿಂದಲೂ ಹಾಗೆಯೇ ತ್ರಿಪುರಾ ಒಂದೇ ರಾಜ್ಯದ ಚುನಾವಣೆ ನಡೆಸಿದ್ದಾದರೆ, ಭವಿಷ್ಯಗಾರರ ಭದ್ರಕೋಟೆಯನ್ನು ಒಡೆದು ಅಲ್ಲಿಯ ಮತದಾರರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಂಡತ್ವದ ಎಡ ಸರಕಾರವನ್ನೇ ಮತ್ತೆ ಅಧಿಕಾರದ ಗದ್ದುಗೆಗೇರಿಸುತ್ತಾರೆಂಬುದನ್ನು ಖಾತ್ರಿ ಮಾಡಿಕೊಂಡಿರುವ ಇಂದಿರಾ ಗಾಂಧಿಯವರು ಗುಂಡೂರಾವ್, ಜಾಫರ್ ಶರೀಫ್‌ರಂಥವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ, ಜನವರಿ 5ರ ಚುನಾವಣೆಯ ನಿರ್ಧಾರ ತೆಗೆದುಕೊಂಡಿರಬೇಕು. ಇದರ ಜೊತೆಯಲ್ಲೇ ಜನಬಲ-ಧನಬಲ ತನ್ನಲ್ಲಿರುವಾಗ ಮತದಾರರು ತನಗೇ ಮತ ಕೊಡುತ್ತಿರುವಾಗ ರಾಜ್ಯಗಳ ಮುಖಂಡರೆಷ್ಟು ಜಗಳವಾಡಿಕೊಂಡರೂ ಕೂಡ, ಚುನಾವಣೆ ನಡೆಸಲು ಅಭ್ಯಂತರವಿಲ್ಲೆಂಬ ನಿರ್ಣಯಕ್ಕೆ ಬಂದಿರಬೇಕು. ವಿರೋಧ ಪಕ್ಷಗಳೆಲ್ಲ ಹೊಂದಾಣಿಕೆಯ ಗೊಂದಲದಲ್ಲಿದ್ದಾಗಲೇ ಚುನಾವಣೆ ಮಾಡಿದರೆ ತನ್ನ ಗೆಲುವಿಕೆ ಅನುಕೂಲವಾಗಬಹುದು. ಕರ್ನಾಟಕ - ಆಂಧ್ರಗಳಲ್ಲಿ ಒಂದನ್ನು ಕಳೆದುಕೊಂಡರೂ ತನ್ನ ರಾಜಕೀಯ ಭವಿಷ್ಯತ್ತಿಗೆ ಗಂಡಾಂತರಕಾರಿ ಎಂದೂ ಇಂದಿರಾ ಗಾಂಧಿಗೆ ಗೊತ್ತು. ಈ ಎಲ್ಲ ಕಾರಣಗಳನ್ನು ಮುಂದಿಟ್ಟುಕೊಂಡೇ ಚುನಾವಣೆ ಸಾರಲಾಗಿದೆ.

ಇಂದಿರಾ ಗಾಂಧಿಯ ಈ ರೀತಿಯ ಗತ್ತುಗಾರಿಕೆಯನ್ನು ನ್ಯಾಯ, ನೀತಿ, ಸಂವಿಧಾನಗಳಿಗೆ ವಿರೋಧವಾದ ನಿಲುವೆಯನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯನ್ನೊಳಗೊಂಡು ಎಲ್ಲ ವಿರೋಧ ಪಕ್ಷಗಳೂ ಖಂಡಿಸಿವೆ. ಸ್ವಲ್ಪ ಮಟ್ಟಿಗೆ ವಿರೋಧ ಪಕ್ಷಗಳಿಗೆಲ್ಲ ಇದರಿಂದ ತೊಂದರೆ ಉಂಟಾಗಬಹುದು. ಮುಖ್ಯವಾಗಿ ಹಣದ ವಿಚಾರದಲ್ಲಿ. ಆಳುವ ಪಕ್ಷದಲ್ಲಿ ಸಾಕಷ್ಟು ಹಣವಿದ್ದರೂ ಕೂಡ ಅವರಲ್ಲಿರುವ "ಪಕ್ಷಾಂತರಿಗಳು" ''ನಿಷ್ಠಾವಂತರು'' ಎಂಬ ಗೊಂದಲ ಇದ್ದೇ ಇದೆ. ಇಂಥ ಪ್ರಶ್ನೆಗಳು ವಿರೋಧಪಕ್ಷಗಳನ್ನು ಕಾಡುತ್ತಿಲ್ಲ.

ಆಂಧ್ರದಲ್ಲಿ ಇಂದಿರಾ ಕಾಂಗ್ರೆಸ್ ಪಕ್ಷದ ಉಮೇದುವಾರರ ಯಾದಿ ಈಗಾಗಲೇ ಸಿದ್ಧವಾಗಿದೆಯಂತೆ. ಚುನಾವಣೆಯ ವಿಷಯ ಆಂಧ್ರದ ಮುಖ್ಯ ಮಂತ್ರಿಗೆ ಈ ಮುಂಚೆಯೇ ತಿಳಿದಂತಾಯಿತು. ಹಾಗೆ ಮಾಡಿದವರು ವಿರೋಧ ಪಕ್ಷಗಳ ಸಂಘಟನೆಗಳು.

ಕರ್ನಾಟಕದಲ್ಲಿ ವಿರೋಧ ಪಕ್ಷಗಳೊಳಗೆ ಹೆಚ್ಚು ಗೊಂದಲ ಉಂಟಾಗಲಿಕ್ಕಿಲ್ಲ. ಆದರೆ ಇಂದಿರಾ ಕಾಂಗ್ರೆಸ್ಸಿನೊಳಗೆ ಗೊಂದಲವೇ ಗೊಂದಲ ಕಂಡುಬರುತ್ತಿದೆ. 1978ರಲ್ಲಿ ಬರೇ 35 ಕಾಂಗ್ರೆಸ್ ಶಾಸಕರಿದ್ದರು. ಶ್ರೀಕಂಠಯ್ಯನವರ ಮುಖಂಡತ್ವದಲ್ಲಿ ಐದು ಡಜನ್ ಶಾಸಕರು ಅನಂತರ ಅರಸ್ ಕಾಂಗ್ರೆಸ್, ಜನತಾ ಪಾರ್ಟಿಯ ಶಾಸಕರೆಲ್ಲ ಕಾಂಗ್ರೆ ಪಕ್ಷ ಸೇರಿದ್ದರಿಂದ ಗುಂಡೂರಾವ್ ಸರಕಾರ ಅಸ್ತಿತ್ವದಲ್ಲುಳಿದಿದೆ. ಆದರೆ ಚುನಾವಣೆ ಮತ್ತು ಸಂಘಟನೆಯಲ್ಲಿ ಅಧಿಕಾರದ ಸ್ಥಾನದ ಪ್ರಶ್ನೆ ಬಂದಾಗ 'ನಿಷ್ಠಾವಂತರು'' "ಪಕ್ಷಾಂತರಿಗಳು" ಎಂಬ ಪ್ರಶ್ನೆಯೂ ಹಾಗೆಯೇ ಗುಂಪುಗಾರಿಕೆಯೂ ಬೃಹದಾಕಾರವಾಗಿ ರೂಪತಾಳುತ್ತಿರುವುದನ್ನು ನೋಡುತ್ತಿದ್ದೇವೆ. ಈ ಕಾರಣದಿಂದಾಗಿ ಕರ್ನಾಟಕದ ಕಾಂಗ್ರೆಸ್ಸಿನಲ್ಲಿ ಜಗಳ ಉಂಟಾಗಬಹುದು. ಅತೃಪ್ತಿಗೊಂಡವರೆಲ್ಲ, ಟಿಕೇಟು ಸಿಗದವರೆಲ್ಲ ಎರಡು ಕಮ್ಯುನಿಸ್ಟ್ ಪಾರ್ಟಿಗಳನ್ನು ಬಿಟ್ಟು ಇತರ ವಿರೋಧ ಪಕ್ಷಗಳಲ್ಲಿ ಸೇರಿ ಸ್ಪರ್ಧಿಸಬಹುದು. ಅಥವಾ ಸ್ವತಂತ್ರರಾಗಿಯೂ ಸ್ಪರ್ಧಿಸಬಹುದು.

ಆದ್ದರಿಂದ ಗುರುತರವಾದ ಜವಾಬ್ದಾರಿ ಜನತೆಯದ್ದಾಗಿದೆ ಮತದಾರರದ್ದಾಗಿದೆ. ಇಂದಿರಾ ಕಾಂಗ್ರೆಸ್ಸನ್ನು ಸೋಲಿಸಲೇಬೇಕು. ಪ್ರಜಾಪ್ರಭುತ್ವದ, ಸಾರ್ವಭೌಮತ್ವದ ಉಳಿವಿಕೆಗಾಗಿ, ರೈತ-ಕಾರ್ಮಿಕರ ಹಿತರಕ್ಷಣೆಗಾಗಿ, ಭ್ರಷ್ಟಾಚಾರ, ಲಂಚಬಡಕತನ, ಜಾತೀಯತೆ, ಗುಂಡಾಗಿರಿಗಳ ನಿರ್ಮೂಲನೆಗಾಗಿ ಇಂದಿರಾ ಕಾಂಗ್ರೆಸ್ ಸೋಲಬೇಕು. ಆದರ ಜೊತೆಯಲ್ಲೇ ಯಾವ ನಿರ್ದಿಷ್ಟ ನಿಲುವಿಲ್ಲದೆ, ಪಕ್ಷಾಂತರವೇ, ಅಧಿಕಾರವೇ ತಮ್ಮ ಗುರಿಯಾಗಿಟ್ಟುಕೊಂಡು ಸ್ವತಂತ್ರರಾಗಿ ಸ್ಪರ್ಧಿಸುವವರನ್ನೂ, ಜಾತೀಯವಾದಿಗಳನ್ನೂ ಸೋಲಿಸಲೇಬೇಕು. ಹಾಗೆಯೇ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ, ಆ ಪಾರ್ಟಿ ಬೆಂಬಲಿಸುವ ಉಮೇದ್ವಾರರನ್ನು ಆರಿಸಿ ತರಲೇಬೇಕು. ಇದರಿಂದಲೇ ಜನಹಿತ ಸಾಧ್ಯ. ಎಲ್ಲ ಜನರೂ ಪ್ರಜಾಪ್ರಭುತ್ವವಾದಿಗಳೂ, ರೈತ-ಕಾರ್ಮಿಕರೂ ಈ ದಿಸೆಯಲ್ಲಿ ದುಡಿಯುವುದು ಅತ್ಯಗತ್ಯ.

ವಿಶ್ವ ಕಥಾ ಕೋಶ: ಕೊನೆಯ ಸಂಪುಟಗಳ ಬಿಡುಗಡೆ

ವಿಶ್ವಸಾಹಿತ್ಯದ ಸವಿಜೇನು ಸಂಗ್ರಹ, ನವಕರ್ನಾಟಕ ಸಂಸ್ಥೆಯವರ ಹೆಮ್ಮೆಯ ಕೊಡುಗೆ ವಿಶ್ವ ಕಥಾ ಕೋಶದ ಕೊನೆಯ ಕಂತಿನ ('ನಿಗೂಢ ಸೌಧ', 'ಬೆಳಗಾಗುವ ಮುನ್ನ', 'ಮರಳುಗಾಡಿನ ಮದುವೆ', 'ಕಿವುಡು ವನದೇವತೆ', 'ಸಾವಿಲ್ಲದವರು' ಮತ್ತು ಪುರವಣಿ ಸಂಪುಟ)ಸಂಪುಟಗಳನ್ನು ನವೆಂಬರ್ 21 ರಂದು ಡಾ|| ಹಾ. ಮಾ. ನಾಯಕ ಬಿಡುಗಡೆ ಮಾಡಿದರು.

ನೂರಹತ್ತು ದೇಶಗಳ ಎಂಬತ್ತೈದು ಭಾಷೆಗಳಿಂದ ಆಯ್ದ ಸುಮಾರು 330 ಅತ್ಯುತ್ತಮ ಕಥೆಗಳು ಈ ಬೃಹತ್ ಯೋಜನೆಯಲ್ಲಿ ಅಡಕವಾಗಿವೆ.

ನವೆಂಬರ್ 21 ರಂದು ನಡೆದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ|| ಗೊರೂರು ರಾಮಸ್ವಾಮಿಅಯ್ಯಂಗಾರ್ ವಹಿಸಿದ್ದರು.

ಬೃಹತ್ ಯೋಜನೆಯನ್ನು ಅಚ್ಚುಕಟ್ಟಾಗಿ ಪೂರೈಸಿದ ಪ್ರಧಾನ ಸಂಪಾದಕ ಶ್ರೀ ನಿರಂಜನರ ಶ್ರಮ ಶ್ಲಾಘನೀಯ. ಸಮಾರೋಪ ಭಾಷಣ ಮಾಡಿದ ನಿರಂಜನ ಅವರು ಕಥೆಗಳನ್ನು ಎಡಪಂಥೀಯ, ಬಲಪಂಥೀಯ ಎಂದು ಪೂರ್ವಾಗ್ರಹ ದೃಷ್ಟಿಯಿಂದ ವಿಶ್ಲೇಷಿಸುವುದನ್ನು ಟೀಕಿಸಿದರು. "ಕಥೆಗಳ ಆಯ್ಕೆಯಲ್ಲಿ ನನಗೆ ಇದ್ದುದು ಒಂದೇ ದೃಷ್ಟಿ ವ್ಯಕ್ತಿ—ಮನುಷ್ಯ— ಎಂದು ನಿರಂಜನರು ನುಡಿದರು.

ಆರಂಭದಲ್ಲಿ ನವಕರ್ನಾಟಕ ಪ್ರಕಾಶನದ ಅಧ್ಯಕ್ಷ ಬಿ. ವ್ಹಿ. ಕಕ್ಕಿಲ್ಲಾಯ ಅವರು ಯೋಜನೆಯ ಸ್ಥೂಲ ಪರಿಚಯ ಮಾಡಿಕೊಟ್ಟರು. ಕೊನೆಯಲ್ಲಿ ವ್ಯವಸ್ಥಾಪಕ ನಿರ್ದೇಶಕ ಆರ್. ಎಸ್. ರಾಜಾರಾಮ್ ಅವರು ಮಾತನಾಡಿ ಈ ಕಾರ್ಯದಲ್ಲಿ ಸಹಕರಿಸಿದವರಿಗೆಲ್ಲ ಆತ್ಮೀಯ ಧನ್ಯವಾದ ಹೇಳಿದರು. ಸಂಸ್ಥೆಯ ಮುಂದಿನ ಯೋಜನೆಯಾದ ನಿರಂಜನರ 100 ಕಥೆಗಳ ಪ್ರಕಟನೆಯನ್ನು ಪ್ರಕಟಿಸುವ ಉದ್ದೇಶವನ್ನು ರಾಜಾರಾಮ್ ಪ್ರಕಟಿಸಿದರು.

ಎಡರಂಗ ಸರ್ಕಾರ—ಜನತೆ ಮತ್ತು ಸಾಮೂಹಿಕ ಚಳವಳಿಗಳ ಪಾತ್ರ

— ಜ್ಯೋತಿಬಸು

[1977ರ ಜೂನ್‌ನಲ್ಲಿ ಕಾಂ| ಜ್ಯೋತಿಬಸು ಪಶ್ಚಿಮ ಬಂಗಾಳದ ಮೊಟ್ಟ ಮೊದಲ ಎಡರಂಗ ಸರ್ಕಾರದ ಮುಖ್ಯ ಮಂತ್ರಿಯಾದರು. ಅಲ್ಲಿಂದೀಚಿನ ಅವಧಿಯಲ್ಲಿ ತಲೆದೋರಿದ ಸಮಸ್ಯೆಗಳನ್ನು ತಮ್ಮ ಅನುಭವದ ಹಿನ್ನಲೆಯಲ್ಲಿ ವಿವೇಚಿಸಿದ್ದಾರೆ]

ಪ. ಬಂಗಾಳ ಎಡರಂಗ ಸರ್ಕಾರವು ಎಂತಹ ಮಿತಿಗಳು ಹಾಗೂ ಅಡೆತಡೆಗಳ ಹಿನ್ನಲೆಯಲ್ಲಿ ಕೆಲಸಮಾಡಬೇಕಾಗಿದೆ ಎಂಬುದು ಜನತೆಗೆ ವೇದ್ಯವಾಗಿದೆ. ಜನತೆಯ ಹಿತದೃಷ್ಟಿಯಿಂದ ಮೂಲಭೂತ ಬದಲಾವಣೆಗಳನ್ನು ನಾವು ತರಲು ಸಾಧ್ಯವಿಲ್ಲವೆಂದು ಮತ್ತೆ ಮತ್ತೆ ಜನತೆಗೆ ಜ್ಞಾಪಿಸಬೇಕಾಗಿದೆ ನಿಜವಾದ ಅಧಿಕಾರ ಕೇಂದ್ರ ಸರ್ಕಾರದೊಡನಿದ್ದು, ಈ ಭೂಮಾಲಿಕ – ಬಂಡವಾಳಶಾಹಿ ಸರ್ಕಾರ ವಿದೇಶಿ ಏಕಸ್ವಾಮ್ಯ ಬಂಡವಾಳದ ಸಹಕಾರದೊಂದಿಗೆ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯನ್ನು ನಿರ್ಮಿಸುತ್ತಿದೆ. ಇದರಿಂದ ಹಿಡಿಯಷ್ಟು ಜನರಿಗೆ ಅನುಕೂಲವಾಗುವುದಲ್ಲದೆ ಬಹುಸಂಖ್ಯಾತ ಜನತೆಯ ಬಡತನವನ್ನು ತೊಡೆಯಲಾಗುವುದಿಲ್ಲ.

ದುರದೃಷ್ಟವಶಾತ್ ಇಂದಿಗೂ ಬಹುಸಂಖ್ಯಾತ ರಾಜ್ಯ ಸರ್ಕಾರಗಳು ಕಾಂಗ್ರೆಸ್ (ಐ) ಹಿಡಿತದಲ್ಲಿದ್ದು ಅದೇ ನೀತಿಯನ್ನು ಅನುಸರಿಸುತ್ತಿವೆ. ಹೀಗಾಗಿ ಈ ರಾಜ್ಯಗಳು ಪರ್ಯಾಯ ಕಾರ್ಯನೀತಿಗೆ ಹೋರಾಡುವ ಪ್ರಶ್ನೆಯೇ ಇಲ್ಲ. ಒಂದು ನಿರ್ಧಿಷ್ಟ ರಾಜ್ಯದಲ್ಲಿ ಕೆಲಸ ಮಾಡುವ ಎಡರಂಗ ಸರ್ಕಾರ ಹಲವಾರು ಅಡೆ ತಡೆಗಳನ್ನು ಎದುರಿಸಬೇಕಾಗಿದೆ— ಸಂವಿಧಾನಾತ್ಮಕ ನಿರ್ಬಂಧಗಳು ಅತಿಯಾಗಿ ಕೇಂದ್ರೀಕರಿಸಲ್ಪಟ್ಟ ಅಧಿಕಾರವುಳ್ಳ ಕೇಂದ್ರ ಸರ್ಕಾರ, ರಾಜ್ಯಗಳಿಗೆ ಸಾಕಷ್ಟು ಅಧಿಕಾರದ ನಿರಾಕರಣೆ. ಕೇಂದ್ರ ರಾಜ್ಯಗಳ ಸಂಭಂಧ ತತ್ವಗಳ ವಿಕೃತರೂಪ — ಮುಂತಾದವುಗಳು. ಮೂಲತಃ ಅರ್ಥ ವ್ಯವಸ್ಥೆಯ ಅಭಿವೃದ್ಧಿ, ಜನತೆಯ ಆರ್ಥಿಕ ಜೀವನ, ನ್ಯಾಯ ಬೆಲೆಯಲ್ಲಿ ಅಗತ್ಯ ವಸ್ತುಗಳ ಸರಬರಾಜು, ಹಣದುಬ್ಬರದ ಮೇಲೆ ನಿಯಂತ್ರಣ, ಬಡತನ ನಿರುದ್ಯೋಗಗಳ ನಿವಾರಣೆ ಇವುಗಳು ಕೇಂದ್ರದ ನೀತಿಗಳು ಮತ್ತು ಯೋಜನೆಯನ್ನು ಅವಲಂಬಿಸಿರುತ್ತದಲ್ಲದೆ ಒಂದು ರಾಜ್ಯವನ್ನಲ್ಲ. ಈ ವಾಸ್ತವತೆಯನ್ನು ಜನತೆ ತಿಳಿದಲ್ಲಿ ತಮ್ಮ ಸಂಕಷ್ಟಗಳಿಗೆ ಹೊಣೆ ಯಾರೆಂಬುದನ್ನು ಅರಿಯುತ್ತಾರೆ.

ಗಮನಾರ್ಹ ಪಾತ್ರ

ಆದರೆ ಈ ಎಲ್ಲ ಮಿತಿಗಳು ಹಾಗೂ ತೊಂದರೆಗಳ ನಡುವೆಯೂ ನಮ್ಮಂತಹ ಎಡರಂಗ ಸರ್ಕಾರಕ್ಕೆ ಭಾರತದ ಆರ್ಥಿಕ, ಸಾಮಾಜಿಕ ರಾಜಕೀಯ ಪರಿಸ್ಥಿತಿಯಲ್ಲಿ ಗಮನಾರ್ಹ ಪಾತ್ರವಿದೆ. ಜನತೆ, ಅದರಲ್ಲೂ ವಿಶೇಷವಾಗಿ ತುಳಿತಕ್ಕೊಳಗಾದ ಜನತೆ, ಹಿಂದಿನ ಕಾಂಗ್ರೆಸ್ ಸರ್ಕಾರ ಹಾಗೂ ಭಾರತದ ಇನ್ನೆಡೆಗಳಲ್ಲಿರುವ ಕಾಂಗ್ರೆಸ್ ಸರ್ಕಾರಕ್ಕೆ ಹೋಲಿಸಿದಾಗ ಹೇಗೆ ನಮ್ಮ ಸರ್ಕಾರ ಅವರ ಬೆಂಗಾವಲಿಗಿದೆ ಮತ್ತು ಅವರ ಹಿತಕ್ಕಾಗಿ ಕೆಲಸ ಮಾಡುತ್ತಿದೆ ಎನ್ನುವುದನ್ನು ನೋಡುತ್ತಿದ್ದಾರೆ. ಅವರೊಂದಿಗೆ ಮತ್ತು ಅವರ ಅಸಂಖ್ಯಾತ ಸಂಘಟನೆಗಳೊಂದಿಗೆ. ಸ್ಪಂದಿಸುತ್ತಾ ಆಡಳಿತ ನಡೆಸುವುದನ್ನು ಕಾಣುತ್ತಿದ್ದಾರೆ. ಎಡರಂಗ ಸರ್ಕಾರವು ಕನಿಷ್ಠ ಕಾರ್ಯಕ್ರಮವನ್ನು ಯಶಸ್ವಿಯಾಗಿ ಜಾರಿಗೊಳಿಸುತ್ತಿರುವುದನ್ನು ರಾಜ್ಯದ ಜನತೆಯಲ್ಲದೆ ದೇಶಾದ್ಯಂತ ಸಾಮಾನ್ಯ ಜನರು ಮೆಚ್ಚಿದ್ದಾರೆ.

ಸಾಮಾನ್ಯ ಜನತೆಗಾಗಿ ಕನಿಷ್ಠ ಕಾರ್ಯಕ್ರಮವನ್ನಾಧರಿಸಿ ಅವರ ರಾಜಕೀಯ ಪ್ರಜ್ಞೆಯನ್ನು ತೀವ್ರಗೊಳಿಸಲು ನಿರಂತರ ಪ್ರಯತ್ನಿಸುತ್ತಿದ್ದೇವೆ. ಜನತೆ ಮಿತ್ರರನ್ನು ಶತ್ರುಗಳನ್ನು ಸರಿಯಾದ ಮತ್ತು ತಪ್ಪು ದಾರಿಯನ್ನು ಮನಗಾಣುತ್ತಿರುವುದಲ್ಲದೆ ವ್ಯವಸ್ಥೆಯ ಮೂಲಭೂತ ಬದಲಾವಣೆಯ ಪ್ರಯಾಸಕರ ದಾರಿಯನ್ನು ಕ್ರಮೇಣ ಅರಿಯುತ್ತಿದ್ದಾರೆ. ನಮ್ಮ ಮುನ್ನಡೆಗೆ ಯಾವುದು ಅಡ್ಡಿಯೊಡ್ಡುತ್ತಿದೆ ಎನ್ನುವುದನ್ನು ನಮ್ಮ ನ್ಯೂನತೆಗಳಿಂದ ಅರ್ಥಮಾಡಿಕೊಳ್ಳುತ್ತಿದ್ದಾರೆ.

ನಮ್ಮ 34 ಅಂಶಗಳ ಕಾರ್ಯಕ್ರಮವಲ್ಲದೆ ಕೇಂದ್ರ ಸರ್ಕಾರದ ಮುಂದೆ 18 ಅಂಶಗಳ ಬೇಡಿಕೆಗಳ ಪಟ್ಟಿಯನ್ನಿಟ್ಟಿದ್ದೇವೆ. ಅದನ್ನು ಜಾರಿಗೊಳಿಸಿದ್ದೇ ಆದಲ್ಲಿ ಗಮನಾರ್ಹ ಬದಲಾವಣೆ ತರಬಹುದಾಗಿದೆ. ಈ ಬೇಡಿಕೆಗಳನ್ನು ಜನಪ್ರಿಯಗೊಳಿಸಿದಲ್ಲಿ ಜನರ ಬೆಂಬಲವನ್ನು ರೂಪಿಸಿದಲ್ಲಿ ಅವರ ಪ್ರಜ್ಞೆಯು ಬೆಳೆಯುವುದಲ್ಲದೆ ಕೇಂದ್ರದ ಮೇಲೂ ಒತ್ತಾಯ ತರಬಹುದಾಗಿದೆ.

ಜಟಿಲವಾದ ಹೊಣೆ

ಪ್ರಸ್ತುತ ಸಂಧರ್ಭದಲ್ಲಿ ಎಡರಂಗದ ಹೊಣೆ ಅತ್ಯಂತ ಜಟಿಲವಾಗಿದ್ದು ಅದರ ಯಶಸ್ಸು ಜನತೆ ಮತ್ತು ಸಾಮೂಹಿಕ ಸಂಘಟನೆಗಳ ಸಹಕಾರವನ್ನವಲಂಬಿಸಿದೆ. ಸಿ.ಪಿ.ಐ (ಎಂ) ಎಡರಂಗದ ದೊಡ್ಡ ವಿಭಾಗವಾಗಿದ್ದು ಅದರ ಮೇಲೆ ಗುರುತರ ಹೊಣೆಯಿದೆ. ಅದನ್ನು ನಿರ್ವಹಿಸಲು ಪ್ರಯತ್ನಿಸಲಾಗುತ್ತಿದೆ. ಆದರೆ ಪಕ್ಷದ ಎಲ್ಲ ಹಂತಗಳಲ್ಲೂ ನಮ್ಮ ಕಾರ್ಯಕ್ರಮ ಮತ್ತು ಹೊಣೆಯನ್ನು ಕುರಿತಂತೆ ತಿಳುವಳಿಕೆ ನೀಡುವುದು, ವೈಯುಕ್ತಿಕವಾಗಿ ಇನ್ನೊಬ್ಬರಿಗೆ ಮಾದರಿಯಾಗುವುದು, ಸೇವೆ ಮತ್ತು ತ್ಯಾಗಗಳನ್ನು ಮೈಗೂಡಿಸಿಕೊಳ್ಳುವುದು, ಪಕ್ಷದ ಒಳಗೆ ಅಥವಾ ಹೊರಗೆ ಭ್ರಷ್ಟಾಚಾರದ ವಿರುದ್ಧ ಹೋರಾಡುವುದು ಮುಂತಾದವುಗಳನ್ನು ವ್ಯವಸ್ಥಿತವಾಗಿ ಮಾಡಬೇಕಾಗಿದೆ.

ಕಳೆದ ಐದು ವರ್ಷದ ಅನುಭವವೆಂದರೆ ನಮ್ಮ ಕನಿಷ್ಠ ಕಾರ್ಯಕ್ರಮವನ್ನು ಜಾರಿಗೊಳಿಸಲು ಕೂಡ ಕಾರ್ಮಿಕರು ನೌಕರರು, ಕೃಷಿ ಕೂಲಿಕಾರರು, ರೈತರು, ವಿದ್ಯಾರ್ಥಿಗಳು, ಯುವಜನತೆ, ಸ್ತ್ರೀಯರು, ಶಿಕ್ಷಕರು, ಎಂಜನೀಯರುಗಳು ಎಲ್ಲರೂ ಬೇಕಾಗುತ್ತಾರೆ ಎನ್ನುವುದು. ಅವರ ಬೆಂಬಲವನ್ನು ನಾವು ಪಡೆಯುವಷ್ಟರ ಮಟ್ಟಿಗೆ ಕಾರ್ಯಕ್ರಮಗಳು ಯಶಸ್ವಿಯಾಗಿವೆ. ಎಲ್ಲಿ ನಾವು ಬೆಂಬಲ ಪಡೆಯಲು ವಿಫಲವಾಗಿದ್ದೇವೊ ಅಲ್ಲಿ ಕಾರ್ಯಕ್ರಮ ಜಾರಿಗೊಳಿಸುವುದು ಕಷ್ಟವಾಗಿದೆ

ನಮ್ಮ ವಿರೋಧಿಗಳು ಸಕ್ರಿಯವಾಗಿದ್ದು ಮತ್ತು ನಿಶ್ಯಕ್ತಿ ಮತ್ತು ಹಿಂಜರಿತದಿಂದ ಹರ್ಷಗೊಳ್ಳುತ್ತಿದ್ದಾರೆ. ಜನತೆಯ ತಿಳುವಳಿಕೆಯ ಮಟ್ಟ ಮತ್ತು ಪ್ರಜ್ಞೆಯ ಮಟ್ಟ ಹೀಗೇ ಇರುತ್ತದೆ ಎಂದು ತಿಳಿಯಬಾರದು. ಬಂಡವಾಳಶಾಹಿಗಳ ನಿರಂತರ ಪ್ರಚಾರದಿಂದ ಅವರನ್ನು ಹಾದಿ ತಪ್ಪಿಸಲು, ನಮ್ಮಿಂದ ದೂರ ಸರಿಸಲು ಯತ್ನಿಸಲಾಗುತ್ತಿದೆ. ಎಲ್ಲ ರೀತಿಯಿಂದ ಇದನ್ನು ವಿರೋಧಿಸಬೇಕಾಗಿದೆ.

ಆರ್ಥಿಕ ಬೆಳವಣಿಗೆಯನ್ನು ಕುರಿತಂತೆ ವಿವಿಧ ವಿಷಯಗಳನ್ನು ಎಡ ಪಕ್ಷಗಳು ಮತ್ತು ಎಡ ಸರ್ಕಾರ ಜನತೆಯ ಮುಂದಿಡಬೇಕು. ಅವುಗಳೆಂದರೆ ಕೇಂದ್ರ ಸರ್ಕಾರದಿಂದ ಕೈಗಾರಿಕೆಗಳನ್ನು ಸ್ಥಾಪಿಸುವುದು, ಬೆಂಗಾಲ್ ಮತ್ತು ಈಶಾನ್ಯ ಭಾರತದಿಂದ ಇಡೀ ದೇಶಕ್ಕೆ ನಿಯಂತ್ರಿತ ಬೆಲೆಯಲ್ಲಿ ಸೆಣಬು, ಕಲ್ಲಿದ್ದಲು ಉಕ್ಕು ಸರಬರಾಜಾಗುತ್ತಿರುವಂತೆ ರಾಜ್ಯಕ್ಕೆ ನಿಯಂತ್ರಿತ ಬೆಲೆಯಲ್ಲಿ ಬೇಕಾದ ಕಚ್ಚಾ ವಸ್ತುಗಳ ಪೂರೈಕೆ, ಆಹಾರ, ಸಿಮೆಂಟ್‌ಗಳ ಯೋಗ್ಯ ಪ್ರಮಾಣದ ಸರಬರಾಜು ಮುಂತಾದವುಗಳು. ಆದರೆ ಕಾಂಗ್ರೆಸ್ (ಐ) ಆಡಳಿತದ ರಾಜ್ಯಗಳಂತೆ ಯಾವುದೇ ಸಂಕುಚಿತ ದೃಷ್ಟಿಯಿಂದ ಇಂತಹ ವಿಷಯಗಳನ್ನು ಪರಾಮರ್ಶಿಸಬಾರದು.

ಕಾರ್ಯಕ್ರಮವನ್ನು ಜಾರಿಗೊಳಿಸುವುದು

ನಾವು ನಮ್ಮ ಭಾಗದ ಕೆಲಸವನ್ನು ಶ್ರದ್ಧೆಯಿಂದ ನಿರ್ವಹಿಸಿ ಪರಿಮಿತ ವಲಯದಲ್ಲೇ ಯಶಸ್ಸನ್ನು ಸಾಧಿಸಿದಾಗ ಮಾತ್ರ ಕೇಂದ್ರ ಸರ್ಕಾರದ ನೀತಿಯ ವಿರುದ್ಧದ ನಮ್ಮ ಎಲ್ಲ ಟೀಕೆಗಳು ಮತ್ತು ಚಳುವಳಿಗಳು ಹೆಚ್ಚು ಅರ್ಥ ಪಡೆಯುತ್ತವೆ. ಕಾಂಗ್ರೆಸ್ ಆಡಳಿತದ ರಾಜ್ಯಗಳಿಗೆ ಹೋಲಿಸಿದಾಗ ನಾವು ಆಡಳಿತವನ್ನು ನಡೆಸುವ ರೀತಿ, ಕಾರ್ಯಕ್ರಮಗಳನ್ನು ಜಾರಿಗೊಳಿಸುವಲ್ಲಿನ ನಮ್ಮ ಪ್ರಯತ್ನ ಜ್ವಲಂತವಾಗಿರಬೇಕು. ನಾವು ಅಷಾಢಭೂತಿಗಳಾಗಿದ್ದು ನಮ್ಮ ಹುಳುಕುಗಳಿಗೆ ಬೇರೆಯವರನ್ನು ದೂಷಿಸಲಾಗುವುದಿಲ್ಲ. ನಮ್ಮ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಜಾರಿಗೊಳಿಸುವುದರಲ್ಲಿ ಸಹಕರಿಸುವ ಹೊಣೆ ವಿಶೇಷವಾಗಿ ಯಾರು ನಮ್ಮ ಬೆಂಬಲಿಗರೆನ್ನುತ್ತಾರೋ ಅವರ ಮೇಲಿದೆ.

ವರ್ಗ ವಿಭಜಿತ ಸಮಾಜದಲ್ಲಿ ಮತ್ತು ಬಂಡವಾಳ ಭೂಮಾಲೀಕ ಕೇಂದ್ರ ಸರ್ಕಾರವಿರುವಾಗ ಚಳುವಳಿಗಳು ಮತ್ತು ಹೋರಾಟಗಳು ಅನಿವಾರ್ಯ ಮತ್ತು ಅತ್ಯಂತ ಪ್ರಮುಖವಾದವುಗಳೇ ಹೀಗಾಗಿ ಅವುಗಳ ಪ್ರಾಮುಖ್ಯತೆಯನ್ನು ಕಡೆಗಣಿಸಲಾಗುವುದಿಲ್ಲ. ಆದರೆ ಹೋರಾಟ ಮತ್ತು ನಮ್ಮ ಕನಿಷ್ಠ ಕಾರ್ಯಕ್ರಮವನ್ನು ಜಾರಿಗೊಳಿಸುವುದರ ಸಂಯುಕ್ತ ಹೊಣೆಯನ್ನು ನಮ್ಮ ಎಲ್ಲ ಚಟುವಟಿಕೆ ಮತ್ತು ಕ್ರಿಯೆಗಳಲ್ಲಿ ಸರಿಯಾಗಿ ಅರ್ಥೈಸಿಕೊಳ್ಳಬೇಕು. ಇವುಗಳೆಲ್ಲದರ ಮಾನದಂಡವೆಂದರೆ ಅವುಗಳು ಸರ್ಕಾರದ ಕೈಬಲಪಡಿಸುತ್ತವೆಯೋ ಮತ್ತು ಜನತೆಯ ರಾಜಕೀಯ ಪ್ರಜ್ಞೆಯನ್ನು ಹೆಚ್ಚಿಸುತ್ತವೆಯೋ ಎನ್ನುವುದು. ಇದು ಇಂದು ಕೇವಲ ಸೈದ್ಧಾಂತಿಕವಾದ ಪ್ರಸ್ತಾಪನೆಯಾಗುಳಿದಿಲ್ಲ.

ಕಳೆದ ಕೆಲ ವರ್ಷಗಳು ಈ ವಿಚಾರಗಳ ಯಥಾರ್ಥತೆಯನ್ನು ಸಾದರಪಡಿಸಿವೆ. ಆದರೆ ಎಲ್ಲ ಹಂತಗಳಲ್ಲೂ ಆಳವಾದ ತಿಳುವಳಿಕೆ ಮೂಡಿಸಲು ನಿರಂತರವಾದ ಶಿಕ್ಷಣ ಮತ್ತು ನಮ್ಮ ಕಾರ್ಯದ ವಿಮರ್ಶೆ ಅಗತ್ಯವಾಗಿದೆ. ಇದರಿಂದಾಗಿ ತಪ್ಪು ಹೆಜ್ಜೆಗಳನ್ನು ಇಡದಂತೆ ಗಮನವಹಿಸಬಹುದು. ಕೆಲವೊಂದು ಕ್ಷೇತ್ರಗಳಲ್ಲಿ ಈ ಪರಿಕಲ್ಪನೆಯ ಕೆಲವು ವಿಶಾಲ ರೂಪುರೇಷೆಗಳನ್ನು ಉದ್ಧರಿಸಬಹುದು. ಉಲ್ಲೇಖಿಸಲಾದ ನಮ್ಮ ನಿಶ್ಯಕ್ತಿ ಮತ್ತು ನ್ಯೂನತೆಗಳನ್ನು ನಮ್ಮ ವಿರೋಧಿಗಳು ಬಳಸಿಕೊಳ್ಳಬಹುದು ಆದರೆ ಸ್ವವಿಮರ್ಶೆಯಿಂದ ಹಿಂಜರಿಯಬಾರದು.

ಸರ್ಕಾರಿ ಕಾರ್ಮಿಕರು, ಮತ್ತು ನೌಕರರು

ಎಲ್ಲ ಹಂತದಲ್ಲೂ ಸರ್ಕಾರಿ ನೌಕರರು ತಮ್ಮ ನ್ಯಾಯಯುತ ಬೇಡಿಕೆಗಳಿಗಾಗಿ ಹೋರಾಡುತ್ತಿರುವಾಗಲೇ ತಮ್ಮ ಕರ್ತವ್ಯಗಳನ್ನು ಕ್ಲುಪ್ತವೇಳೆಯಲ್ಲಿ ಮಾಡಲು, ವೇಗಗೊಳಿಸಲು, ನಕಾರಾತ್ಮಕ ದೃಷ್ಟಿ ಬದಲಾಯಿಸಿಕೊಳ್ಳಲು ಮತ್ತು ಸಾರ್ವಜನಿಕರಿಂದ ದೂರುಗಳನ್ನು ಪಡೆಯಲು ನಿರಂತರ ಪ್ರಯತ್ನ ಮಾಡಬೇಕಾಗಿದೆ. ಇದು ಅಧಿಕಾರಿಗಳಿಗೂ ಅನ್ವಯಿಸುತ್ತದೆ. ಶಿಸ್ತನ್ನು ಪಾಲಿಸುವುದರ ಮೂಲಕ ಪರಿಸ್ಥಿತಿಯನ್ನು ಬದಲಾಯಿಸಬಹುದು. ಹಳೆಯ ಚಾಳಿಗಳು ಸುಲಭವಾಗಿ ಹೋಗುವುದಿಲ್ಲ; ಪ್ರಜ್ಞಾಪೂರ್ವಕವಾಗಿ ಅವುಗಳನ್ನು ತೊರೆಯಬೇಕು.

ರಾಜ್ಯ ಸರ್ಕಾರದ ಉದ್ಯಮಗಳಲ್ಲಿ, ದುಃಸ್ಥಿತಿಯಲ್ಲಿರುವ ಕೈಗಾರಿಕೆಗಳನ್ನು ತೆಗೆದುಕೊಂಡಿರುವಲ್ಲಿ, ಸಾರ್ವಜನಿಕ ಸಾಗಣಿಕೆ, ಆಹಾರ ಮತ್ತು ಡೈರಿ ಅಭಿವೃದ್ಧಿ ಕ್ಷೇತ್ರಗಳಲ್ಲಿ, ವೈದ್ಯಕೀಯ ಸೇವಾ ಕೇಂದ್ರಗಳಲ್ಲಿ, ಶಕ್ತಿ ಪೂರೈಕೆ ಉದ್ಯಮಗಳಲ್ಲಿ ಮತ್ತು ಸಾಮಾಜಿಕ ಸೇವಾ ಕೇಂದ್ರಗಳಲ್ಲಿ ಸಾಧನೆ ತೋರಿಸಲು ವಿಶೇಷ ಮತ್ತು ಪ್ರಜ್ಞಾಪೂರ್ವಕ ಪ್ರಯತ್ನ ಅವಶ್ಯವಾಗಿದೆ. ನಮ್ಮ ಬೆಂಬಲಿಗರು ಈ ದಿಕ್ಕಿನಲ್ಲಿ ಮಹತ್ವದ ಪಾತ್ರ ನಿರ್ವಹಿಸಬೇಕಾಗಿದೆ.

ಆಡಳಿತ ವರ್ಗ ಮತ್ತು ಅಧಿಕಾರಶಾಹಿ ವಿರುದ್ಧದ ಬೇಡಿಕೆಗಳು ಮತ್ತು ಕುಂದುಕೊರತೆಗಳನ್ನು ಪರಿಹರಿಸಿಕೊಳ್ಳಲು ವ್ಯವಸ್ಥಿತವಾದ ಮಾರ್ಗಗಳಿವೆ ಮತ್ತು ಅಂತಿಮವಾಗಿ ಪರಿಹಾರಕ್ಕೆ ಸರ್ಕಾರಿ ಇಲಾಖೆಗಳು ಮತ್ತು ಮಂತ್ರಿಗಳು ಇದ್ದಾರೆ. ಈ ಸಂಭಂದದಲ್ಲಿ ಸ್ವಲ್ಪ ವಿಳಂಬವಾಗಬಹುದು. ಆದರೆ ಬೇರೆ ಎಲ್ಲ ಮಾರ್ಗಗಳನ್ನು ಅನುಸರಿಸುವುದರ ಮುನ್ನ ಕೆಲಸ ಸ್ಥಗಿತಗೊಳಿಸುವುದು, ಅಡಚಣೆಯುಂಟುಮಾಡುವುದು ನಡೆಯಬಾರದು. ಪ್ರತಿಯೊಂದು ನ್ಯಾಯಬದ್ಧ ಕುಂದುಕೊರತೆಯನ್ನು ನಮ್ಮ ಸರ್ಕಾರ ಪರಿಶೀಲಿಸಿ ಪರಿಹರಿಸುತ್ತದೆಂದು ವಿಶ್ವಾಸಪೂರ್ಣವಾಗಿ ಹೇಳಬಹುದು. ಬೇಡಿಕೆಗಳನ್ನು ರೂಪಿಸುವಾಗ ಬೇಜವಾಬ್ದಾರಿಯುತ ಹಾಗೂ ನಮ್ಮ ವಿರೋಧಿಗಳಾದ ಇಂಟಕ್‌ಗಳಂತ ಸಂಘಟನೆಗಳೊಂದಿಗೆ ಅನಾರೋಗ್ಯಕರ ಸ್ಪರ್ಧೆಯಲ್ಲಿ ನಮ್ಮನ್ನು ಬೆಂಬಲಿಸುವ ಕಾರ್ಮಿಕರು ಇಳಿಯಬಾರದು.

ಮಂತ್ರಿಗಳು ಮತ್ತು ಇಲಾಖೆಗಳು ಮುಷ್ಕರಕ್ಕೆಡೆಮಾಡಿಕೊಡುವಂತಹ ರೀತಿಯಲ್ಲಿ ವ್ಯವಹರಿಸಬಾರದು. ಅವರುಗಳು ನಮ್ಮನ್ನು ಬೆಂಬಲಿಸುವ ನೌಕರರ ಸಂಘಟನೆಗಳೊಂದಿಗೆ ನಿಕಟ ಸಂಭಂದವನ್ನು ಹೊಂದಿರಬೇಕು. ಇಂಟಕ್ ಮತ್ತಿನ್ನಿತರ ಪ್ರತಿಗಾಮಿ ಸಂಘಟನೆಗಳಿಗೆ ಕಾರ್ಮಿಕರ ಒಟ್ಟಾರೆ ಹಿತರಕ್ಷಣೆಗಿಂತ ಸರ್ಕಾರ ಮತ್ತು ಆಡಳಿತ ವರ್ಗಗಳಿಗೆ ತೊಂದರೆ ಕೊಡುವಲ್ಲಿ ಆಸಕ್ತವಾಗಿವೆ. ಪರಿಣಾಮವಾಗಿ ತಿಳುವಳಿಕೆ ಕಡಿಮೆ ಇರುವ ಕಾರ್ಮಿಕರಲ್ಲಿ ಅಸಮಾಧಾನವಿದ್ದರೆ ನಾವು ವೃಥಾ ಗಾಬರಿಗೊಳ್ಳಬಾರದು. ಸತತ ಪ್ರಯತ್ನ ಹಾಗೂ ವಿವರಣೆಗಳು ಮತ್ತು ಅವರದೇ ಅನುಭವದ ಮೂಲಕ ತಪ್ಪು ತಿಳುವಳಿಕೆ ದೂರವಾಗುತ್ತದೆ.

(ಮುಂದಿನ ಸಂಚಿಕೆ ನೋಡಿ)

ರಾಯಚೂರು :

ಕೊಳಚೆ ಪ್ರದೇಶಗಳ ಅಭಿವೃದ್ಧಿಗೆ ಒತ್ತಾಯಿಸಿ ಹೋರಾಟ ಪ್ರಾರಂಭ

ರಾಯಚೂರು ನಗರದಲ್ಲಿ ಇತ್ತೀಚೆಗೆ ಅನೇಕ ಕಾರ್ಖಾನೆಗಳು ಪ್ರಾರಂಭವಾಗುತ್ತಿದ್ದು, ಉದ್ಯೋಗವನ್ನರಸಿ ಜಿಲ್ಲೆಯ ವಿವಿಧ ಭಾಗಗಳಿಂದ ಕೃಷಿ ಕೂಲೀಕಾರರು ನಗರಕ್ಕೆ ಬರುತ್ತಿದ್ದಾರೆ. ಜಿಲ್ಲೆಯ ಕೆಲವು ಭಾಗಗಳಲ್ಲಿ ತೀವ್ರ ಬರಗಾಲವಿರುವುದರಿಂದ ವಲಸೆ ಪ್ರಮಾಣ ಹೆಚ್ಚಾಗಿದೆ. ವಾಸಿಸಲು ಇವರಿಗೆ ಸ್ಥಳವಿಲ್ಲದೇ ಅನಿವಾರ್ಯವಾಗಿ ಕೊಳಚೆ ಪ್ರದೇಶಗಳಲ್ಲಿ ತುಣುಕು ಜಾಗದಲ್ಲಿ ವಾಸಿಸುತ್ತಿದ್ದಾರೆ. ನಗರದ ಒಟ್ಟು 1 ಲಕ್ಷ 30 ಸಾವಿರ ಜನ ಸಂಖ್ಯೆಯಲ್ಲಿ ಸುಮಾರು ಎಪ್ಪತ್ತೈದು ಸಾವಿರ ಜನ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಇದರಿಂದ ಸಮಸ್ಯೆಯ ಗಂಭೀರತೆಯ ಅರಿವಾಗಬಹುದು.

ಇನ್ನು, ಆ ಕೊಳಚೆ ಪ್ರದೇಶಗಳ ಪರಿಸ್ಥಿತಿಯನ್ನು ವಿವರಿಸುವ ಅಗತ್ಯವಿಲ್ಲ. ಒಂದೇ ಗುಡಿಸಲಿನಲ್ಲಿ 3-4 ಕುಟುಂಬಗಳು; ನೀರು, ದೀಪ, ರಸ್ತೆ, ಶೌಚಾಲಯ — ಈ ಯಾವ ಕನಿಷ್ಠ ಸೌಲಭ್ಯಗಳೂ ಈ ಪ್ರದೇಶಗಳಲಿಲ್ಲ.

ಇಲ್ಲಿನ ನಗರಸಭೆ ಕಾಂಗ್ರೆಸ್ ಕಪಿಮುಷ್ಟಿಯಲ್ಲಿದೆ. ಜನತೆಯ ಮೇಲೆ ಮಿತಿ ಮೀರಿ ಕರಭಾರ ಹೇರುತ್ತಿದ್ದು 1982ರಲ್ಲಿ ಸುಮಾರು ಒಂದು ಕೋಟಿ ಮೂವತ್ತೆರಡು ಲಕ್ಷ ರೂ. ಹಣವನ್ನು ವಸೂಲು ಮಾಡಿದ್ದಾರೆ. ಅದೂ ಯಾವುದೇ ಸೌಲಭ್ಯ ನೀಡದೇ.

ಕಳೆದ ಮೇ–ಜೂನ್ ತಿಂಗಳಲ್ಲಿ ಸಿ.ಪಿ.ಐ. (ಎಂ) ಮತ್ತಿತರ ವಿರೋಧ ಪಕ್ಷಗಳ ನೇತೃತ್ವದಲ್ಲಿ ಕೊಳಚೆ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ಒತ್ತಾಯಿಸಿ ಹೋರಾಟ ನಡೆಸಲಾಗಿತ್ತು. ಫಲವಾಗಿ ನೀರಿನ ತೊಂದರೆಗಾಗಿ ಕೆಲವು ಕೊಳವೆ ಭಾವಿಗಳನ್ನು ತೋಡಿಸಲಾಗಿತ್ತು. ಕೆಲವೆಡೆ ದೀಪದ ಸೌಕರ್ಯ ಒದಗಿಸಲಾಗಿತ್ತು. ಎರಡು ತಿಂಗಳ ಅವಧಿಯಲ್ಲಿ ಎಲ್ಲಾ ಅಭಿವೃದ್ಧಿ ಕ್ರಮಗಳನ್ನು ಕೈಗೊಳ್ಳುವ ಭರವಸೆಯನ್ನು ಆ ಸಮಯದಲ್ಲಿ ಜಿಲ್ಲಾಧಿಕಾರಿ ನೀಡಿದ್ದರು. ಈ ಅವಧಿಯಲ್ಲಿ ಸುಮಾರು ಹದಿನೈದು ಸಲ ಜಿಲ್ಲಾಧಿಕಾರಿಯವರನ್ನು ಭೇಟಿಯಾಗಿದ್ದರೂ ಪ್ರಯೋಜನವಾಗಿಲ್ಲ.

ಈ ನಿಸ್ಸೀಮ ನಿರ್ಲಕ್ಷ್ಯದ ವಿರುದ್ಧ ಹೋರಾಟ ಕೈಗೊಳ್ಳಲು ಸಿ. ಪಿ. ಐ. (ಎಂ) ನಗರ ಸಮಿತಿ ತೀರ್ಮಾನಿಸಿದೆ. ಜಿಲ್ಲಾಧಿಕಾರಿ ಕಚೇರಿ ಎದುರು ಅನಿರ್ದಿಷ್ಟಾವಧಿಯ ಸತ್ಯಾಗ್ರಹಕ್ಕೆ ಏರ್ಪಾಡು ನಡೆದಿದೆ. ಪೂರಕವಾಗಿ ಲಾಲ್‌ಬಹಾದ್ದೂರ್ ಶಾಸ್ತ್ರಿ ನಗರ ಮತ್ತು ನೀರಭಾವಿ ಕುಂಟಾ ಕೊಳಚೆ ಪ್ರದೇಶಗಳಲ್ಲಿ ಬಹಿರಂಗ ಸಭೆ ನಡೆಸಲಾಗಿದೆ.

ಬಡ ಜನತೆಯ ಅನುಕೂಲಕ್ಕಾಗಿ ನಡೆಸಲಿರುವ ಹೋರಾಟಕ್ಕೆ ನಾಗರೀಕರು ಬೆಂಬಲಿಸಬೇಕೆಂದು ಕಾಂ। ಪುರುಷೋತ್ತಮ ಮನವಿ ಮಾಡಿದ್ದಾರೆ.

○

ದೆಹಲಿ :

ಕನಿಷ್ಟ ವೇತನ ಸಿಗಲೇಬೇಕು

"ಯಾವುದೇ ನಿರ್ದಿಷ್ಟ ಧೋರಣೆಯಿಲ್ಲದೆ ಕನಿಷ್ಟ ವೇತನ ನಿರ್ಧರಿಸಲಾಗುತ್ತಿದೆ. ಆ ರೀತಿಯಲ್ಲಿ ನಿರ್ಣಯಿಸಿದ ವೇತನ ಕೂಡ ಕಾರ್ಮಿಕರಿಗೆ ಲಭ್ಯವಾಗುತ್ತಿಲ್ಲ. ಸರಕಾರವೇ ನಿರ್ಧರಿಸಿದ ಕನಿಷ್ಟ ವೇತನ ಕೊಡದ ಮಾಲೀಕರ ಮೇಲೆ ಯಾವುದೇ ಕ್ರಮ ತೆಗೆದುಕೊಳ್ಳಲಾಗುತ್ತಿಲ್ಲ. ಆದ್ದರಿಂದ ದೇಶಾದ್ಯಂತ ಸಂಯುಕ್ತ ಹೋರಾಟದ ಸಿದ್ಧತೆ ಮಾಡುವುದು ಅಗತ್ಯವೆಂದು ಕಾಂ। ಪಿ. ರಾಮಮೂರ್ತಿಯವರು, ನವೆಂಬರ್ 7 ರಂದು ದೆಹಲಿಯಲ್ಲಿ ಕನಿಷ್ಟ ವೇತನಕ್ಕಾಗಿ ನಡೆದ ಸಮಾವೇಶವನ್ನು ಉದ್ಘಾಟನೆ ಮಾಡುತ್ತ ಹೇಳಿದರು. ಮಧ್ಯ ಪ್ರದೇಶ, ರಾಜಸ್ತಾನ, ಉತ್ತರ ಪ್ರದೇಶ, ಪಂಜಾಬ್, ಹರ್‍ಯಾಣಾ ಮತ್ತು ದೆಹಲಿಗಳಿಂದ 150 ಪ್ರತಿನಿಧಿಗಳು ಹಾಜರಿದ್ದರು.

ಪ್ರತಿ ತಿಂಗಳೂ ರೂ. 500 ಕನಿಷ್ಟ ವೇತನ, ಜೀವನ ಸೂಚ್ಯಾಂಕ 300 ಕ್ಕೂ ಮೀರಿದರೆ ಪ್ರತಿ ಸೂಚ್ಯಾಂಕಕ್ಕೆ ರೂ. 1–70 ರಂತೆ ತುಟ್ಟಿ ಭತ್ತೆ, ಸಂಬಳ ಕಡಿಮೆ ಇದ್ದಲ್ಲಿ ಕನಿಷ್ಟ ವೇತನಕ್ಕೆ ಅದನ್ನು ತರಬೇಕು, ಎಲ್ಲ ಕೆಲಸಗಾರರನ್ನು ಕನಿಷ್ಟ ವೇತನ ಕಾಯಿದೆಗೆ ಅಳವಡಿಸಬೇಕು. ಹಾಗೆಯೇ ಕನಿಷ್ಟ ವೇತನಕ್ಕಿಂತಲೂ ಹೆಚ್ಚು ಸಂಬಳ ಪಡೆಯುವ ಹಕ್ಕು ಸಿಗಬೇಕು, ಕನಿಷ್ಟ ವೇತನ ಕಾಯಿದೆಯನ್ನು ಮುರಿಯುವ ಮಾಲಕರ ಮೇಲೆ ತೀವ್ರಕ್ರಮಕೈಗೊಳ್ಳಬೇಕೆಂಬ ನಿರ್ಣಯ ಈ ಸಮಾವೇಶದಲ್ಲಿ ಪಾಸು ಮಾಡಲಾಯಿತು.

5-1-83 ರಂದು "ಕನಿಷ್ಟ ವೇತನ ದಿನ" ಆಚರಿಸಬೇಕೆಂದೂ, ಸಾಮೂಹಿಕ ಸಹಿ ಸಂಗ್ರಹಮಾಡಿ ಕಾರ್ಮಿಕ ಮಂತ್ರಿಗಳಿಗೆ ಪ್ರತಿಯೊಂದು ರಾಜ್ಯದಲ್ಲೂ ಮನವಿಗಳನ್ನು ಸಲ್ಲಿಸಬೇಕೆಂದೂ, ಧರಣಿ, ಸಮಾವೇಶಗಳನ್ನು ಸಂಘಟಿಸಬೇಕೆಂದೂ ನಿರ್ಣಯಿಸಲಾಯಿತು.

○

ದಾಂಡೇಲಿ :

ಉರವಲು ಕಟ್ಟಿಗೆ ಕೊರತೆ ನೀಗಿಸಲು ಒತ್ತಾಯ

ಸುಮಾರು 50 ಸಾವಿರ ಜನಸಂಖ್ಯೆ ಇರುವ ದಾಂಡೇಲಿ ನಗರದಲ್ಲಿ ದಿನ ಬಳಕೆಯ ಉರವಲು ಕಟ್ಟಿಗೆ ಡಿಪೋ ಇರುವದು ಕೇವಲ ಎರಡು ಮಾತ್ರ. ಸಕಾಲಕ್ಕೆ ಕಟ್ಟಿಗೆ ದೊರೆಯದೆ ಪ್ರತಿನಿತ್ಯ ಜನ ಪರದಾಡುವಂತಾಗಿದೆ.

ಉರವಲು ಕಟ್ಟಿಗೆ ಕೊರತೆ ನೀಗಿಸಲು ಒತ್ತಾಯಿಸಿ ಸಿ. ಪಿ. ಐ. (ಎಂ) ಕಾರ್ಯಕರ್ತರು ನವೆಂಬರ್ 12 ರಂದು ಉಪ ಡಿವ್ಹಿಜನಲ್ ಫಾರೆಸ್ಟ್ ಆಫೀಸರರಿಗೆ ಮನವಿ ಸಲ್ಲಿಸಿದರು. ಪ್ರತಿ ಕುಟುಂಬಕ್ಕೆ ಕನಿಷ್ಟ ಐದು ಕ್ವಿಂಟಾಲ್ ಕಟ್ಟಿಗೆ ದೊರೆಯಬೇಕು; ಇನ್ನೆರಡು ಕಟ್ಟಿಗೆ ಡಿಪೋ ತೆರೆಯಬೇಕು — ಇವು ಮನವಿಯ ಮುಖ್ಯಾಂಶಗಳು.

ಮನವಿ ಸಲ್ಲಿಸುವ ಮುನ್ನ ನವೆಂಬರ್ 12 ರಂದು ಬಹಿರಂಗ ಸಭೆ ನಡೆಯಿತು. ಅಧ್ಯಕ್ಷತೆಯನ್ನು ಕಾಂ। ಮಂಜುನಾಥ ಹಲಕರ ವಹಿಸಿದ್ದರು. ಸಭೆಯನ್ನುದ್ದೇಶಿಸಿ ಕಾಂ। ಎಂ. ಎಸ್. ಧಾರೇಶ್ವರ, ಹರೀಶ್ ನಾಯ್ಕ, ವೆಸ್ಟ್ ಕೋಸ್ಟ್ ಪೇಪರ್ ಮಿಲ್ ಎಂಪ್ಲಾಯೀಸ್ ಯೂನಿಯನ್ನಿನ ಉಪಾಧ್ಯಕ್ಷ ಕಾಂ। ರಾಜೇಂದ್ರಪ್ರಸಾದ್, ತಾಲ್ಲೂಕು ಘಟಕದ ಕಾರ್ಯದರ್ಶಿ ಕಾಂ। ಉಮೇಶ್ ನಾಯ್ಕ ಮೊದಲಾದವರು ಮಾತನಾಡಿದರು.

○

ಕೆ.ಜಿ.ಎಫ್. :

ಪೌರ ಕಾರ್ಮಿಕರಿಂದ ಭಾರೀ ಪ್ರತಿಭಟನಾ ಮೆರವಣಿಗೆ

ಕೆ. ಜಿ. ಎಫ್. ನ ಪುರಸಭಾ ಅಧಿಕಾರಿಗಳ ನಿರ್ಲಕ್ಷತೆ ಹಾಗೂ ಅಸಭ್ಯ ವರ್ತನೆಗಳನ್ನು ಪ್ರತಿಭಟಿಸಿ ಮತ್ತು ತಮ್ಮ ಒಂಬತ್ತು ಮುಖ್ಯ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿ 24-11-82 ರಂದು ಪೌರ ಕಾರ್ಮಿಕರು ಭಾರೀ ಪ್ರತಿಭಟನಾ ಮೆರವಣಿಗೆ ನಡೆಸಿದರು. ಮೆರವಣಿಗೆಯ ನೇತೃತ್ವವನ್ನು ಕಾಂ।ಸವರೀದಾಸ್ ವಹಿಸಿದ್ದರು. ನಂತರ ಪುರಸಭಾ ಅಧಿಕಾರಿಗೆ ಮನವಿ ಸಲ್ಲಿಸಲಾಯಿತು.

ಪೌರ ಕಾರ್ಮಿಕರ ಸಂಘಕ್ಕೆ ಇತ್ತೀಚೆಗೆ ಚುನಾವಣೆ ನಡೆದಿದ್ದು, ಪದಾಧಿಕಾರಿಗಳು ಇಂತಿದ್ದಾರೆ.

ಅಧ್ಯಕ್ಷರಾಗಿ ಕಾಂ। ಸವರೀದಾಸ್, ಉಪಾಧ್ಯಕ್ಷರಾಗಿ ಕಾಂ।ಟಿ.ಎಸ್. ಮಣಿ, ಕಾರ್ಯದರ್ಶಿಯಾಗಿ ರಾಮಚಂದ್ರ, ಸಹ ಕಾರ್ಯದರ್ಶಿಯಾಗಿ ಕೆ. ಆರ್. ಶ್ರೀನಿವಾಸನ್, ಖಜಾಂಚಿಯಾಗಿ ಜಯಮ್ಮ ಮತ್ತು ರಾಮಚಂದ್ರರಾವ್ ಇವರುಗಳು ಆಯ್ಕೆಯಾಗಿದ್ದಾರೆ.

●

ಬೆಂಗಳೂರು :

'ರಿವೋಲಿ' ಹೋಟೆಲ್ ಕಾರ್ಮಿಕರ ಮೇಲೆ ಪೋಲಿಸ್ ದೌರ್ಜನ್ಯ

ಆಗಸ್ಟ್ ತಿಂಗಳಿಂದ ಹೋರಾಟ ನಿರತ ರಿವೋಲಿ ಹೋಟೆಲ್ ಕಾರ್ಮಿಕರ ಮೇಲೆ ನವೆಂಬರ್ 24 ರಂದು ನಿಜಾಂ ಮುದ್ದೀನರ ಬಂಟರು ಅಮಾನುಷ ದೌರ್ಜನ್ಯ ನಡೆಸಿರುವುದಾಗಿ ವರದಿಯಾಗಿದೆ.

ಬೆಂಗಳೂರಿನ ಕೆ. ಎಚ್. ರಸ್ತೆಯಲ್ಲಿರುವ ಈ ಹೋಟೆಲ್‌ನ 27 ಕಾರ್ಮಿಕರನ್ನು 3-8-82 ರಂದು ಅಕ್ರಮವಾಗಿ ಕೆಲಸದಿಂದ ವಜಾಮಾಡಲಾಗಿತ್ತು. ಹೋಟೆಲ್ ಎದುರು ಧರಣಾ ನಡೆಸುತ್ತಿದ್ದ ಕಾರ್ಮಿಕರು ದಿನನಿತ್ಯ ಮಾಲೀಕನ ಮತ್ತು ಪೋಲಿಸರ ಕಿರುಕುಳ ಎದುರಿಸಿಯೂ ಹೋರಾಟ ನಡೆಸಿದ್ದಾರೆ.

ನವೆಂಬರ್ 24 ರಂದು ರಾತ್ರಿ ಸಕ್ರೀಯ ಕಾರ್ಯಕರ್ತರಾದ ಹರಿದಾಸ್, ಗೋಪಾಲನ್, ಅಪ್ಪು ಮತ್ತು ಸಿ. ಸಿ. ಕೃಷ್ಣನ್ ನಾಯರ್ ಇವರುಗಳನ್ನು ಠಾಣೆಗೆ ಕರೆದೊಯ್ದು ಥಳಿಸಿದ್ದಾರೆ. ಸಬ್ ಇನ್‌ಸ್ಪೆಕ್ಟರರನ್ನು ಕೇಳಿದರೆ— "ಮೇಲಿನಿಂದ ಆರ್ಡರ್" — ಎಂದಿದ್ದಾರೆ.

ಈ ಘಟನೆಯನ್ನು ತೀವ್ರವಾಗಿ ಖಂಡಿಸಿರುವ ಹೋಟೆಲ್ ಕಾರ್ಮಿಕ ಸಂಘ (ಸಿ. ಐ. ಟಿ. ಯು.) ವು, ಹೋರಾಟ ಮುಂದುವರೆಸುವುದಾಗಿ ತಿಳಿಸಿದೆ.

○

ಪುತ್ತೂರು :

ದ.ಸಂ.ಸ. ನೇತೃತ್ವದಲ್ಲಿ ಬಹಿರಂಗ ಸಭೆ

ಪುತ್ತೂರು ತಾಲ್ಲೂಕಿನ ನಿಡ್ಪಳ್ಳಿ ಗ್ರಾಮದಲ್ಲಿ ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಮಿತಿಯ ನೇತೃತ್ವದಲ್ಲಿ 15-11-82 ರಂದು ಬಹಿರಂಗ ಸಭೆ ನಡೆಯಿತು.

ತಾಲ್ಲೂಕು ಕೇಂದ್ರದಿಂದ 13 ಮೈಲು ದೂರದಲ್ಲಿರುವ ಕುಗ್ರಾಮವಾದ ನಿಡ್ಪಳ್ಳಿಯ ಹೆಚ್ಚಿನಂಶ ದಲಿತರು ಭೂರಹಿತರು. ಭೂಮಿಗಾಗಿ ಅರ್ಜಿ ಸಲ್ಲಿಸಿ ವರ್ಷಗಳೇ ಕಳೆದಿದ್ದರೂ ಫಲ ದೊರೆತಿರಲಿಲ್ಲ. ದ.ಸಂ.ಸ. ತಾಲ್ಲೂಕು ಸಂಚಾಲಕ ಬಿ. ಚೋಮ ಅವರು ಈ ದಲಿತರನ್ನು ಸಂಘಟಿಸಿ ಹೋರಾಟಕ್ಕೆ ಅಣಿಗೊಳಿಸಿದರು ಫಲವಾಗಿ ಹಕ್ಕು ಪತ್ರ ದೊರೆಯಿತು.

ಹಕ್ಕು ಪತ್ರವೇನೋ ದೊರೆಯಿತು. ಆದರೆ ಭೂಮಿ ಎಲ್ಲಿದೆ ಎಂಬುದೇ ಗೊತ್ತಾಗಲಿಲ್ಲ. ಗಡಿಮಂಗಡನೆ ಮಾಡಿ ಕೊಡಲು ಕರಣಿಕರನ್ನು ಹಾಲವಾರು ಸಲ ವಿನಂತಿಸಿದರೂ ಪ್ರಯೋಜನವಾಗಲಿಲ್ಲ. ಕೊನೆಗೆ ಅನಿರ್ದಿಷ್ಟಾವಧಿಯ ಸತ್ಯಾಗ್ರಹದ ತೀರ್ಮಾನ ಕೈಗೊಂಡಾಗ ಸಂಬಂಧಿಸಿದ ಅಧಿಕಾರಿಗಳು ಗಡಿಮಂಗಡನೆ ಮಾಡಿ ಕೊಟ್ಟರು.

15-11-82 ರಂದು ಈ ಕುರಿತು ಗ್ರಾಮದಲ್ಲಿ ಬಹಿರಂಗ ಸಭೆ ನಡೆಯಿತು. ಸಭೆಯನ್ನುದ್ದೇಶಿಸಿ ಕಾಂ। ಪರಮೇಶ್ವರನ್ ನಂಬೀಶನ್ ಮತ್ತು ಬಿ. ರಾಮಕೃಷ್ಣ ಅವರು ಮಾತನಾಡಿ ಸಂಘಟಿತ ಹೋರಾಟದಿಂದ ಮಾತ್ರ ನ್ಯಾಯಪಡೆಯಲು ಸಾಧ್ಯವೆಂದರು. ಭೂ ಮಾಲೀಕರ ಪಿತೂರಿಯನ್ನು ಕಡೆಗಣಿಸಿ ಸುಮಾರು 500ಕ್ಕಿಂತಲೂ ಹೆಚ್ಚು ರೈತ ಕೃಷಿ ಕಾರ್ಮಿಕರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಮೂರ್ತೆದಾರರು ಹೋರಾಟದ ಕಣಕ್ಕೆ

ದ. ಕ. ಜಿಲ್ಲೆಯ ಮೂರ್ತೆದಾರರು ತಮ್ಮ ಸಮಸ್ಯೆಗಳ ಕುರಿತು ನಡೆಸಿರುವ ಹೋರಾಟದ ಕುರಿತು ಐಕ್ಯರಂಗ ಈಗಾಗಲೇ ವರದಿ ಮಾಡಿತ್ತು.

ಜಿಲ್ಲಾಧಿಕಾರಿಗೆ, ಕಂಟ್ರಾಕ್ಟ್‌ದಾರರಿಗೆ ಮನವಿ ಸಲ್ಲಿಸಿದಾಗ್ಯೂ ಏನೂ ಕ್ರಮ ಜರುಗಿಸಿಲ್ಲ. ಶೇಂದಿ ಅಂಗಡಿ ಹರಾಜಿನಿಂದ ಕೋಟಿ ಗಟ್ಟಲೆ ಹಣ ಪಡೆದುಕೊಳ್ಳುತ್ತಿರುವ ಸರಕಾರದಿಂದ ಬಡ ಮೂರ್ತೆದಾರರು ನ್ಯಾಯ ಪಡೆಯುವುದು ಹೇಗೆ ತಾನೇ ಸಾಧ್ಯ ?

ದೊಡ್ಡ ದೊಡ್ಡ ಗುತ್ತಿಗೆದಾರರಿಂದ ತಮಗೆ ನಡೆಯುವ ಅನ್ಯಾಯದ ವಿರುದ್ಧ ಮೂರ್ತೆದಾರರು 30–11-82 ರಿಂದ ಹೋರಾಟ ಆರಂಭಿಸಿದ್ದಾರೆ.

ಲೀಟರ್ ಒಂದಕ್ಕೆ ರೂ. 1-50 ರಂತೆ ಕೊಡಬೇಕು (ಈಗ ದೊರೆಯುತ್ತಿರುವುದು ಕೇವಲ 70 ಪೈಸೆ); ಮೂರ್ತೆಗೆಬೇಕಾಗುವ ಸಾಮಗ್ರಿಗಳನ್ನು ಒದಗಿಸಬೇಕು; ಇತರ ಕಾರ್ಮಿಕರಿಗೆ ದೊರೆಯುವ ಸೌಲಭ್ಯಗಳು ತಮಗೂ ದೊರೆಯಬೇಕು — ಇವು ಮೂರ್ತೆದಾರರ ಬೇಡಿಕೆಗಳು.

(ಕಳೆದ ಸಂಚಿಕೆಯಿಂದ)

ಪರಿಣಾಮವಾಗಿ, ಇಷ್ಟೆಲ್ಲಾ ಎಡರು ತೊಡರುಗಳಿದ್ದರೂ 1981ರಷ್ಟರಲ್ಲಿ ಚೀನಾದ ಆಹಾರೋತ್ಪಾದನೆಯು 325 ಮಿ. ಟನ್‌ಗಳಷ್ಟಾಗಿತ್ತು. ಆ ವರ್ಷ ಉತ್ತಮವಾಗಿರದೆ ಸಾಮಾನ್ಯವಾಗಿತ್ತು. 1980-81ರಲ್ಲಿ ಭಾರತದ ಆಹಾರೋತ್ಪಾದನೆ 134 ಮಿ. ಟನ್ನುಗಳಷ್ಟಾಗಿದ್ದು ಅದೊಂದು ಉತ್ತಮ ದಾಖಲೆ ಎಂದು ತಿಳಿಯಲಾಗಿತ್ತು. ಭಾರತಕ್ಕಿಂತ ಒಂದೂವರೆ ಪಾಲಿನಷ್ಟೇ ಜನಸಂಖ್ಯೆ ಇರುವ ಚೀನಾದ ಆಹಾರೋತ್ಪಾದನೆಯು ಭಾರತದ ಆಹಾರೋತ್ಪಾದನೆಯು ಎರಡೂವರೆ ಪಾಲಷ್ಟಾಗಿರುವುದನ್ನು ಗಮನಿಸಬೇಕು. ಅಂದರೆ ಚೀನಾದ ಜನರ ಸರಾಸರಿ ಆಹಾರ ಉತ್ಪಾದನೆಯು ಭಾರತಕ್ಕಿಂತ ಶೇ. 70 ರಷ್ಟು ಹೆಚ್ಚಾಗಿದೆ ! ಚೀನಾದ ಸರಾಸರಿ ರಾಷ್ಟ್ರೀಯ ಒಟ್ಟು ಉತ್ಪಾದನೆಯು ಭಾರತಕ್ಕಿಂತ ಬಹಳ ಹೆಚ್ಚಾಗಿದೆ.

ಮೇಲಿನ ಅಂಕಿ ಅಂಶಗಳ ಆಧಾರ : 8-11-82 ರಂದು ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಪ್ರಕಟವಾದ ಜವಾಹರಲಾಲ್ ನೆಹರು ವಿಶ್ವವಿದ್ಯಾನಿಲಯದ ಆಫ್ರಿಕಾ ಮತ್ತು ಏಷ್ಯಾ ಭಾಷೆಗಳ ಕೇಂದ್ರದ ಅಧ್ಯಕ್ಷರಾದ ಟಾನ್ ಚುಂಗ್ ಅವರ ಲೇಖನ. 2-11-82 ರಂದು ಅದೇ ಪತ್ರಿಕೆಯಲ್ಲಿ ವಿಜ್ಞಾನ ಮತ್ತು ಪರಿಸರ ಕೇಂದ್ರ ಪ್ರಕಟಿಸಿದ ಒಂದು ಲೇಖನದಂತೆ ಚೀನಾ ಇತ್ತೀಚೆಗೆ ಅಕ್ಕಿ ಉತ್ಪಾನೆಯಲ್ಲಿ ಪ್ರಪಂಚದಲ್ಲಿಯೇ ಮಹತ್ವದ ಸಾಧನೆ ಮಾಡಿರುವುದು ತಿಳಿದು ಬಂದಿದೆ. ಚೀನಾದ ವಿಜ್ಞಾನಿಗಳು ಭತ್ತದ ಹೊಸತಳಿಯನ್ನು ಅನ್ವೇಷಣೆ ಮಾಡಿದ್ದು, ಆ ಹ್ಯಾಬ್ರಿಡ್ ತಳಿಯನ್ನು ಚೀನಾದ ಐಂದ್ರಜಾಲಿಕ ಅಕ್ಕಿ ಎಂದು ವರ್ಣಿಸಲಾಗಿದೆ. ಈ ತಳಿಯಿಂದ ಫಿಲಿಫೈನ್ಸ್‌ನಲ್ಲಿರುವ ಜಗತ್ ಪ್ರಸಿದ್ಧವಾದ ಅಂತರರಾಷ್ಟ್ರೀಯ ಅಕ್ಕಿ ಅನ್ವೇಷಣಾ ಸಂಸ್ಥೆಯು (IRRI) ಅಭಿವೃದ್ಧಿಗೊಳಿಸಿದ ಹ್ಯಾಬ್ರಿಡ್ ತಳಿಗಳಿಗಿಂತಲೂ ಉತ್ತಮವಾಗಿದ್ದು, ಅವುಗಳಿಗಿಂತ ಶೇ. 20 ರಿಂದ ಶೇ. 30ರಷ್ಟು ಹೆಚ್ಚು ಫಸಲು ಸಿಗುತ್ತದೆ. ಕಳೆದ ಐದು ವರ್ಷಗಳಲ್ಲಿ ಚೀನಾ ಈ ಹ್ಯಾಬ್ರಿಡ್ ಅಕ್ಕಿ ಬೀಜವನ್ನು 16.7 ಮಿ. ಹೆಕ್ಟೇರು ಪ್ರದೇಶದಲ್ಲಿ ಬಿತ್ತನೆಮಾಡಿ ದೇಶದ ವಾರ್ಷಿಕ ಅಕ್ಕಿ ಉತ್ಪಾದನೆ 13 ಮಿ. ಟನ್‌ಗಳಷ್ಟು ಹೆಚ್ಚಿಸಲಾಯಿತು ಫಿಲಿಪೈನ್ಸ್ ಅಂತರರಾಷ್ಟ್ರೀಯ ಸಂಸ್ಥೆ 1970ರ ದಶಕದಲ್ಲಿ ಸಾಧಿಸಲಾರದ್ದನ್ನು ಚೀನಾದ ವಿಜ್ಞಾನಿಗಳು ಸ್ವತಂತ್ರವಾಗಿ ಅಕ್ಕಿಯ ಹ್ಯಾಬ್ರಿಡ್ ತಳಿಯನ್ನು ಕಂಡುಹಿಡಿದು ತನ್ನ ದೇಶದ ಅಕ್ಕಿ ಉತ್ಪಾದನೆಯನ್ನು ಹೆಚ್ಚಿಸಿದುದು ಜಗತ್ತಿಗೇ ಆಶ್ಚರ್ಯವಾಗಿದೆ. ಚೀನಾದ ಹ್ಯಾಬ್ರಿಡ್ ಅಕ್ಕಿ ತಳಿಯ ಕುರಿತು ಇಂದು ಅಮೇರಿಕ, ಯುರೋಪ್, ಏಷ್ಯಾ, ಮಧ್ಯಪೂರ್ವದ ದೇಶಗಳು ಅತ್ಯಂತ ಆಸಕ್ತಿ ತಾಳಿವೆ. ಇಷ್ಟರಲ್ಲಿಯೇ ಚೀನಾ ಈ ವಿಷಯದ ತಂತ್ರಜ್ಞಾನವನ್ನು ಈ ದೇಶಗಳಿಗೆ ವಿನಿಮಯ ಮಾಡುವ ಸಿದ್ಧತೆಯಲ್ಲಿದೆ !

ಆರ್ಥಿಕ ಸಮೀಕ್ಷೆ:

ಚೀನಾದ ಅದ್ಭುತ ಪ್ರಗತಿ

–ಆರ್. ಚಂದ್ರ

ಸಮಾನ ವಿತರಣೆ, ಸಮಾಜಿಕ ನ್ಯಾಯ:

ಉತ್ತಮ ಉತ್ಪಾದನಾ ದಾಖಲೆಯೊಂದಿಗೆ ಚೀನಾದಲ್ಲಿ ಉತ್ತಮ ಸಮಾನವಿತರಣೆಯ ವ್ಯವಸ್ಥೆಯೂ ಇದೆ. ಪ್ರತಿಯೊಬ್ಬ ಚೀನಾದ ಪ್ರಜೆಯೂ-ಪ್ರಾಯ ಪ್ರಬುದ್ಧರೂ, ವೃದ್ಧರೂ, ಅಶಕ್ತರೂ ಜೀವನಾವಶ್ಯಕ ವಸ್ತುಗಳ ಕನಿಷ್ಠ ಪಡಿತರ ಖಾತರಿಯಾಗಿ ಪಡೆಯುವರು. 1979ರಷ್ಟರಲ್ಲಿಯೇ ಚೀನಾದ ಪ್ರತಿಯೊಬ್ಬನಿಗೂ ವರ್ಷಕ್ಕೆ 150 ಕಿಲೊ ಆಹಾರ ಧಾನ್ಯ ದೊರೆಯುತ್ತಿತು. ಅಕ್ಕಿ ಬೆಳೆಯುವ ಪ್ರದೇಶಗಳಲ್ಲಿ ಪ್ರತಿ ಒಬ್ಬನಿಗೆ 200 ಕಿಲೋ ಆಹಾರ ಧಾನ್ಯ ದೊರೆಯುತ್ತಿತ್ತು. ವಿಶ್ವ ಬ್ಯಾಂಕಿನ ಅಂದಾಜಿನಂತೆ ಈ ಕನಿಷ್ಠ ಪ್ರಮಾಣವು ಪ್ರತಿ ಒಬ್ಬನಿಗೆ ಕನಿಷ್ಠ 1400 ಕಿಲೋರಿ ಶಕ್ತಿಯನ್ನು ನೀಡಬಲ್ಲುದು- ಹೆಚ್ಚಿನ ಪ್ರಜೆಗಳಿಗೆ ಕನಿಷ್ಠ ಪ್ರಮಾಣಕ್ಕಿಂತ ಹೆಚ್ಚಾಗಿಯೇ ಆಹಾರ ಧಾನ್ಯಗಳು ದೊರಕುವುವು. ಈ ದಿಸೆಯಲ್ಲಿ ಸರಕಾರವೇ ಸಂಪೂರ್ಣ ಹೊಣೆಗಾರಿಕೆ ಹೊತ್ತಿದೆ. ಸರಕಾರವು ಆಹಾರ ಧಾನ್ಯಗಳ ಖರೀದಿ, ಸಂಗ್ರಹಣೆ, ವಿತರಣೆ ಇತ್ಯಾದಿ ಎಲ್ಲಾ ಚಟುವಟಿಕೆಗಳಲ್ಲಿ ನೇರವಾಗಿ ಭಾಗವಹಿಸುವುದು. ಚೀನಾದಲ್ಲಿ ವರ್ಷಕ್ಕೆ 50 ಮಿ. ಟನ್ ಆಹಾರ ಧಾನ್ಯಗಳನ್ನು ಸಾರ್ವಜನಿಕ ವಿತರಣೆಯ ಮೂಲಕ ಜನರಿಗೆ ಒದಗಿಸಲಾಗುತ್ತಿದೆ. ಪ್ರಪಂಚದಲ್ಲಿಯೇ ಚೀನಾದ ಸಾರ್ವಜನಿಕ ವಿತರಣಾ ವ್ಯವಸ್ಥೆಯು ಅತ್ಯಂತ ದೊಡ್ಡದು ಮತ್ತು ಪರಿಣಾಮಕಾರಿಯಾದುದು. ಬರಗಾಲ, ಮಹಾಪೂರ, ಇತ್ಯಾದಿ ನೈಸರ್ಗಿಕ ವಿಕೋಪಗಳಿಂದ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಕೊರತೆ ಸಂಭವಿಸಿದಾಗ ಜನರು ಹಸಿವೆಯಿಂದ ಸಾಯದೆ ಸಾರ್ವಜನಿಕ ವಿತರಣಾ ವ್ಯವಸ್ಥೆಯಿಂದ ಸಾಕಷ್ಟು ಪ್ರಮಾಣದಲ್ಲಿ ಸಮಾನವಾಗಿ ಆಹಾರ ಧಾನ್ಯಗಳನ್ನು ಪಡೆಯುತ್ತಾರೆ. ಜನರ ಪೌಷ್ಠಿಕ ಆಹಾರ ಸೇವನೆಯು ಹೆಚ್ಚುತ್ತಿದ್ದು ಮಕ್ಕಳ ಮರಣ ಬಹಳ ಇಳಿಮುಖವಾಗಿದ್ದು, ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಚೀನಾದ ಸಾಧನೆಯು ಅಭಿವೃದ್ಧಿ ಹೊಂದಿದ ದೇಶಗಳಿಗೆ ಸರಿಸಮಾನವಾಗಿದೆ! (ಜಾಗತಿಕ ಅಭಿವೃದ್ಧಿ ವರದಿ : 1982)

ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಚೀನಾದ ಜನರಿಗೆ ಇತರ ಜೀವನಾವಶ್ಯಕ ವಸ್ತುಗಳನ್ನೂ ಸಮಾನವಾಗಿ ಹಂಚಲಾಗುತ್ತಿದೆ. 1978ರಲ್ಲಿ ಸರಾಸರಿ ವಾರ್ಷಿಕ ರಾಷ್ಟ್ರೀಯ ಉತ್ಪಾದನೆ : ಚೀನಾ: 230 ಸೆಲಿಂಗ್, ಭಾರತ 180 ಸೆಲಿಂಗ್. ಚೀನಾ ಸಮಾಜವಾದಿ ರಾಷ್ಟ್ರವಾದುದರಿಂದ ವಿತರಣೆಯಲ್ಲಿ ಸಮಾನತೆ ಇರುವುದರಿಂದ ವಾಸ್ತವಿಕವಾಗಿ ಬಹು ಸಂಖ್ಯಾತ ಜನರು ಸರಾಸರಿಗಿಂತ ಹೆಚ್ಚಿನ ಆದಾಯಪಡೆದವರಾಗಿದ್ದಾರೆ. ಭಾರತದಲ್ಲಿ ಇನ್ನೂ ಬಂಡವಾಳಶಾಹಿ ಪದ್ಧತಿ ಇರುವುದರಿಂದ ವಾರ್ಷಿಕ ಸರಾಸರಿ ಆದಾಯವು ಬಡ ಬೋರೇಗೌಡನ ಆದಾಯ ಮತ್ತು ಶ್ರೀಮಂತರಾದ ಟಾಟಾ ಬಿರ್ಲಾರ ಆದಾಯಗಳ ಸರಾಸರಿಯಾಗಿದ್ದು, ವಾಸ್ತವಿಕವಾಗಿ ಬಹುಸಂಖ್ಯಾತ ಜನರ ಆದಾಯವು ಸರಾಸರಿಗಿಂತ ಕಡಿಮೆಯಾಗಿದ್ದು ಅವರು ಬಡತನ ರೇಖೆಗಿಂತ ಕೆಳಮಟ್ಟದಲ್ಲಿಯೇ ಜೀವಿಸುತ್ತಿದ್ದಾರೆ.

ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ದೇಶಗಳೂ ಅವುಗಳನ್ನು ಹೆಚ್ಚಾಗಿ ಅವಲಂಬಿಸಿರುವ ಅಭಿವೃದ್ಧಿ ಹೊಂದುತ್ತಿರುವ ಭಾರತದಂತಹ ದೇಶಗಳೂ ಹಣದುಬ್ಬರ, ನಿರುದ್ಯೋಗ, ಆರ್ಥಿಕ ಹಿಂಜರಿತ, ಇತ್ಯಾದಿ ದುಃಸ್ಥಿತಿಗಳನ್ನು ಎದುರಿಸುತ್ತಿರುವಾಗ ಚೀನಾದಲ್ಲಿ ಮಾತ್ರ ಏಕಪ್ರಕಾರ ಶೀಘ್ರಗತಿಯಲ್ಲಿ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲಾಗಿದೆ. ಕಳೆದ ಕೆಲವು ವರ್ಷಗಳಲ್ಲಿ (1978-81) ಎಲ್ಲಾ ಕ್ಷೇತ್ರಗಳಲ್ಲಿ ಸಾಧಿಸಿದ ಪ್ರಗತಿಯು, ಜನರ ಜೀವನ ಮಟ್ಟದ ಏರಿಕೆಯು, ಚೀನಾದ ಇತಿಹಾಸದಲ್ಲಿಯೇ ಅದ್ಭುತವಾಗಿದೆ. ಈ ಅವಧಿಯಲ್ಲಿ ಚೀನಾದ ಜನರ ಸರಾಸರಿ ವರಮಾನದ ಏರಿಕೆಯು ಹೀಗಿದೆ :

	1976	1981	ವಾರ್ಷಿಕ ಅಭಿವದ್ಧಿ ದರದ ಹೆಚ್ಚಳ
ಸರಾಸರಿ ವಾರ್ಷಿಕ ವರಮಾನ :	134 Y	233 Y	18.5%
ಪಟ್ಟಣಗಳಲ್ಲಿನ ಕಾರ್ಮಿಕ ಕುಟುಂಬಗಳ ಸರಾಸರಿ ವಾರ್ಷಿಕ ವರಮಾನ :	315 Y	463 Y	30.8%

(ಬೆಲೆ ಏರಿಕೆಗೆ ಸೂಕ್ತ ತಿದ್ದುಪಡಿ ಮಾಡಿಕೊಂಡು ಈ ಹೆಚ್ಚಳ ಸಾಧಿಸಲಾಯಿತು)

1978-81ರ ಅವಧಿಯಲ್ಲಿ ಪ್ರತಿ ವರ್ಷಕ್ಕೆ ಗ್ರಾಮೀಣ ನಿವಾಸಿಗಳಲ್ಲಿ ಪ್ರತಿ ಒಬ್ಬರೂ 50 ಕೆ.ಜಿ. ಉತ್ತಮ ಆಹಾರ ಧಾನ್ಯಗಳ ಹೆಚ್ಚಿಗೆ ಪಡಿತರ ಪಡೆದರು. ಈ ಅವಧಿಯಲ್ಲಿ ಈ ಜನರ ಉಣ್ಣೆ, ಸಿಲ್ಕ್, ನ್ಯಾಚಿನ್, ಇತ್ಯಾದಿ ಬೆಲೆಬಾಳುವ ವಸ್ತುಗಳ ಬಳಕೆಯು ದ್ವಿಗುಣಗೊಂಡಿತು.

ಅಕ್ಷರತೆ ಮತ್ತು ಆಯುಷ್ಯ :

ಮೂಲಭೂತ ಅವಶ್ಯಕತೆಗಳನ್ನು ಕನಿಷ್ಠ ಪ್ರಮಾಣದಲ್ಲಿ ಸಮಾನವಾಗಿ ಚೀನಾದ ಜನರಿಗೆ ಒದಗಿಸುವುದರೊಂದಿಗೇ, ಇತರ ಕ್ಷೇತ್ರಗಳಲ್ಲಿಯೂ ಚೀನಾದ ಸಾಧನೆಯು ಅದ್ಭುತವಾಗಿದೆ. ವಿಶ್ವ ಬ್ಯಾಂಕಿನ ವರದಿಯಂತೆ ಚೀನಾದ ಜನರ ಅಕ್ಷರತೆ ಮತ್ತು ದೀರ್ಘಾಯುಷ್ಯಗಳು ಆಶ್ಚರ್ಯಕರವಾಗಿ ಹೆಚ್ಚಾಗಿದೆ.

		ದೀರ್ಘಾಯುಷ್ಯ	ವಯಸ್ಕರ ಸಾಕ್ಷರತೆ
ಎಲ್ಲಾ ದೇಶಗಳು	(1979)	58 ವರ್ಷ	56%
ಚೀನಾ	(1977)	64 ವರ್ಷ	66%
ಭಾರತ	(1977)	52 ವರ್ಷ	36%

ಈ ಸರಾಸರಿಗಳು ಚೀನಾದ ಅಂಕಿ ಅಂಶಗಳನ್ನೂ ಒಳಗೊಂಡಿರುವುದರಿಂದ. ಅವುಗಳನ್ನು ಹೊರತುಪಡಿಸಿದರೆ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಸಾಧನೆಗೂ ಚೀನಾದ ಸಾಧನೆಗೂ ಇರುವ ಅಂತರ ಇನ್ನಷ್ಟೂ ಹೆಚ್ಚು.

ಜನಸಂಖ್ಯಾ ನಿಯಂತ್ರಣ :

1950 ಮತ್ತು 1960ರ ದಶಕಗಳಲ್ಲಿ ಚೀನಾ ಜನಸಂಖ್ಯಾ ನಿಯಂತ್ರಣಕ್ಕೆ ಹೆಚ್ಚು ಆದ್ಯತೆ ನೀಡಲಿಲ್ಲ. ಆದರೆ, 1970ರ ದಶಕದಿಂದ ಈ ವಿಷಯಕ್ಕೆ ವಿಶೇಷ ಗಮನ ನೀಡಲಾಯಿತು ಪರಿಣಾಮ, ಜನನ ದರದಲ್ಲಿ ತೀವ್ರ ಇಳಿಮುಖ 1970ರಲ್ಲಿ ಜನನ ದರ : ಪ್ರತಿ ಸಾವಿರಕ್ಕೆ 34; 1979ರಲ್ಲಿ ಜನನ ದರ : ಪ್ರತಿ ಸಾವಿರಕ್ಕೆ 18. ಭಾರತದಲ್ಲಿ ಪ್ರತಿ ಸಾವಿರಕ್ಕೆ ಜನದ ದರ : 1961ರಲ್ಲಿ 47.7, 1981ರಲ್ಲಿ 36. ಚೀನಾದ ಈಗಿನ ಜನಸಂಖ್ಯೆಯು 100 ಕೋಟಿಯಾಗಿದ್ದು ಈ ಶತಮಾನ ಅಂತ್ಯದಲ್ಲಿ ಅದು 120 ಕೋಟಿಗೆ ಮೀರದಂತೆ ಹೊಸ ಜನಸಂಖ್ಯಾ ನಿಯಂತ್ರಣ ಧೋರಣೆಯನ್ನು ರೂಪಿಸಲಾಗುತ್ತಿದೆ. ಇದರಂತೆ ಒಂದು ಕುಟುಂಬಕ್ಕೆ ಒಂದೇ ಮಗು ಸಾಕು ಎಂಬುದನ್ನು ಜನಪ್ರಿಯಗೊಳಿಸಲಾಗುತ್ತಿದೆ. ಜನಸಂಖ್ಯಾ ಹೆಚ್ಚಳ ದರವು ಸದ್ಯದಲ್ಲಿಯೇ ಶೂನ್ಯವಾಗಬೇಕೆಂಬ ಗುರಿ ಚೀನಾದ್ದಾಗಿದೆ. ಆದರೆ ಭಾರತದಲ್ಲಿ ಕಳೆದ ಮೂರು ದಶಕಗಳಲ್ಲಿ ಜನಸಂಖ್ಯೆಯು 36 ಕೋಟಿಯಿಂದ 68 ಕೋಟಿಯಷ್ಟು ಹೆಚ್ಚಾಗಿದೆ. ಜನಸಂಖ್ಯಾ ಹೆಚ್ಚಳದ ದರವು ಪ್ರತಿ ದಶಕಲ್ಲಿಯೂ ಹೆಚ್ಚುತ್ತಿದೆ. 1950ರ ದಶಕದಲ್ಲಿ: 1.98%, 1960ರ ದಶಕದಲ್ಲಿ : 2.20%, 1970ರ ದಶಕದಲ್ಲಿ : 2.23%. ಈ ದರವನ್ನು ಇಳಿಮುಖಗೊಳಿಸುವುದು, ಚೀನಾದಂತೆ ಶೂನ್ಯಕ್ಕೆ ತರುವುದು ಎಷ್ಟು ಕಷ್ಟಸಾಧ್ಯ ಎಂಬುದು ಸ್ಪಷ್ಟವಾಗಿದೆ.

ವಿಶ್ವ ಬ್ಯಾಂಕಿನ ವರದಿಯಂತೆಯೇ ಕಡಿಮೆ ವರಮಾನವಿರುವ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಚೀನಾ ದೇಶದಲ್ಲಿ ಮಾತ್ರ ಜನಸಂಖ್ಯಾ ನಿಯಂತ್ರಣವು ಯಶಸ್ವಿಯಾಗಿದೆ. ಆದರೆ, ಚೀನಾವು ವಿಶ್ವ ಬ್ಯಾಂಕಿನ ಧೋರಣೆಯನ್ನು ಈ ವಿಷಯದಲ್ಲಿ ಅನುಸರಿಸಲಿಲ್ಲ. ಬದಲು, ಜನರಿಗೆ ಜೀವನಾವಶ್ಯಕತೆಗಳನ್ನು ಒಂದು ಕನಿಷ್ಠ ಮಟ್ಟದಲ್ಲಾದರೂ ಒದಗಿಸಿ, ಅವರ ಆರೋಗ್ಯ, ಶಿಕ್ಷಣ, ವಸತಿ, ಉದ್ಯೋಗ, ಇತ್ಯಾದಿ ಸೌಲಭ್ಯಗಳನ್ನು ಹೆಚ್ಚಿಸುವ ಮೂಲಕ ಜನಸಂಖ್ಯಾ ನಿಯಂತ್ರಣ ಸಾಧ್ಯವಾಯಿತು. ಮೇಲಾಗಿ, ಚೀನಾದಲ್ಲಿ ಜನಸಂಖ್ಯಾ ನಿಯಂತ್ರಣವನ್ನು ಒಂದು ರಾಷ್ಟ್ರವ್ಯಾಪಿ ಆರೋಗ್ಯಕರವಾದ ಆಂದೋಳನವಾಗಿ ಕಾರ್ಯಗತಗೊಳಿಸಲಾಯಿತು. ಭಾರತವೂ ಸೇರಿದಂತೆ ಇತರ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ವಿಶ್ವ ಬ್ಯಾಂಕಿನ ಸಲಹೆಯಂತೆ ಕೇವಲ ಜನಸಂಖ್ಯಾ ನಿಯಂತ್ರಣದ ತಂತ್ರಗಳಿಗೆ ಪ್ರಾಶಸ್ತ್ಯಕೊಡಲಾಯಿತು. ಇದರಿಂದ ಈ ಕ್ಷೇತ್ರದಲ್ಲಿ ಬಂಡವಾಳಶಾಹಿ ರಾಷ್ಟ್ರಗಳಿಗೆ ಭಾರತದಂತಹ ಹಿಂದುಳಿದ ದೇಶಗಳಲ್ಲಿ ಹೊಸ ಮಾರುಕಟ್ಟೆ ಸಿಗುವಂತಾಯಿತು. ಕೆಲವೆಡೆಗಳಲ್ಲಿ ಕಡ್ಡಾಯ, ಬಲಪ್ರಯೋಗಮಾಡಿ ಜನರಿಗೆ ಹಿಂಸೆಕೊಡಲಾಯಿತು. ಉದಾ : ಭಾರತದಲ್ಲಿ ತುರ್ತು ಪರಿಸ್ಥಿತಿಯಲ್ಲಿ ಬಲಾತ್ಕಾರವಾಗಿ ಸಂತಾನ ನಿಯಂತ್ರಣದ ಶಸ್ತ್ರಕ್ರಿಯೆ ! ಜನರ ಜೀವನಾವಶ್ಯಕತೆಗಳನ್ನು ಪೂರೈಸಲು ಇತರ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ವಿಫಲವಾದವು. ಕಾರಣ, ಜನಸಂಖ್ಯಾ ನಿಯಂತ್ರಣವೂ ಸೋತಿತು. ಭಾರತದಂತಹ ಬಡ ದೇಶಗಳಲ್ಲಿ ಮಕ್ಕಳು ಹೆಚ್ಚಿದಷ್ಟೂ ದುಡಿಯುವ ಕೈಗಳು ಹೆಚ್ಚಿ ಕುಟುಂಬದ ಆದಾಯ ಹೆಚ್ಚಿಸಬಹುದೆಂಬ ನಂಬಿಕೆಯು ಬೇರೂರಿದೆ. ಮಕ್ಕಳ ಸಾವಿನ ದರವೂ ಹೆಚ್ಚಿರುವುದರಿಂದ 1–2 ಮಕ್ಕಳಿಗೆ ಸಂತಾನ ನಿಯಂತ್ರಿಸಲು ಭಾರತದ ಬಡ ಕುಟುಂಬಗಳು ಧೈರ್ಯ ಮಾಡುತ್ತಿಲ್ಲ. ಆದುದರಿಂದ, ಭಾರತದಲ್ಲಿ ಮತ್ತಿತರ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಜನಸಂಖ್ಯಾ ನಿಯಂತ್ರಣದ ಸಂದೇಶ ಮಧ್ಯಮ ವರ್ಗದ ಮತ್ತು ಶ್ರೀಮಂತ ವರ್ಗದ ಕುಟುಂಬಗಳಿಗೆ ಮಾತ್ರ ತಲುಪಿರಬಹುದು, ಬಡಕುಟುಂಬಗಳಿಗೆ ಅದು ತಲುಪಲೇ ಇಲ್ಲ.

ಅಧಿಕ ಉದ್ಯೋಗಾವಕಾಶಗಳು :

ಚೀನಾದಂತಹ ಸಮಾಜವಾದಿ ರಾಷ್ಟ್ರದಲ್ಲಿ ಎಷ್ಟು ಬಂಡವಾಳ ಹೂಡಬೇಕು, ಯಾವ ಕ್ಷೇತ್ರದಲ್ಲಿ ಬಂಡವಾಳ ಹೂಡಬೇಕು, ಯಾವ ತಂತ್ರಜ್ಞಾನವನ್ನು ಬಳಸಬೇಕು, ಯಾವುದನ್ನು ಎಷ್ಟು ಉತ್ಪಾದಿಸಬೇಕು, ಹೇಗೆ ವಿತರಣೆ ಮಾಡಬೇಕು, ಇತ್ಯಾದಿ ಪ್ರಮುಖ ನಿರ್ಧಾರಗಳನ್ನು ಕೇಂದ್ರ ಯೋಜನೆಯಂತೆ ಕೈಕೊಳ್ಳಲಾಗುವುದು. ಯೋಜನೆಯು ಸಾಮಾಜಿಕ ಆದ್ಯತೆಗಳನ್ನು ನಿರ್ಧರಿಸುವುದು. ಬಂಡವಾಳಶಾಹಿ ಸಮಾಜಗಳಲ್ಲಿ ಈ ನಿರ್ಧಾರಗಳನ್ನು ಕೈಕೊಳ್ಳುವವರು ಲಾಭಕೋರ ಏಕಸ್ವಾಮ್ಯ ಕೈಗಾರಿಕಾ

(7 ನೇ ಪುಟ ನೋಡಿ)

ನೆರೆಹೊರೆ

(2ನೇ ಪುಟದಿಂದ)

ಪಶ್ಚಿಮ ಬಂಗಾಳ :

ಕಾಂಗ್ರೆಸ್ (ಐ)ನ ಸುಳ್ಳಿನ ಕಾರ್ಖಾನೆ ಭರದಲ್ಲಿ

ಇತ್ತೀಚಿನ ವರ್ಷಗಳಲ್ಲಿ ಅತೀ ಭಯಾನಕವಾದ ಬರಗಾಲವನ್ನು ಒಗ್ಗಟ್ಟಿನಿಂದ ಎದುರಿಸಬೇಕೆಂಬ ಎಡರಂಗ ಸರಕಾರದ ಕರೆಗೆ ಪ್ರತಿಯಾಗಿ ರಾಜ್ಯ ಕಾಂಗ್ರೆಸ್ (ಐ)ನ ಯುಜಮಾನರುಗಳು ಗೂಂಡಾಗಿರಿ, ಅಪಪ್ರಚಾರದ ಕ್ರಿಮಿನಲ್ ಕಾರ್ಯಗಳಲ್ಲಿ ಮಗ್ನರಾಗಿದ್ದಾರೆ. ತಾವು ಅಧಿಕಾರದಲ್ಲಿದ್ದಾಗ ಹಾಗೂ ಈಗ ಅಧಿಕಾರದಲ್ಲಿರುವೆಡೆಗಳಲ್ಲೆಲ್ಲಾ ಭ್ರಷ್ಟಾಚಾರದಲ್ಲಿ ತೇಲುತ್ತಿರುವ ಇವರು ಎಡರಂಗ ಸರಕಾರದ ಸ್ಥಳೀಯ ಸ್ವಯುಮಾಡಳಿತ ಮಂತ್ರಿ ಪ್ರಶಾಂತ್ ಸೂರ್ ವಿರುದ್ಧ ನಾಚ್ಕೀಮಾದರಿಯ ಅಪಪ್ರಚಾರ ನಡೆಸಿದ್ದಾರೆ. ಸಣಬು ಕೈಗಾರಿಕೋದ್ಯಮಿಗಳ ಒಡೆತನದಲ್ಲಿರುವ ಪತ್ರಿಕಾ ರಂಗ, ವಿಶೇಷವಾಗಿ ಆನಂದ್ ಬಜಾರ್ ಪತ್ರಿಕಾ, ಇದಕ್ಕೆ ಎಲ್ಲಾ ಸಹಾಯ ನೀಡುತ್ತಿದೆ. ಗಮನಿಸಬೇಕಾದ ಅಂಶವೆಂದರೆ ಈ ಪತ್ರಿಕೆಗಳು ಮತ್ತು ಕಾಂಗ್ರೆಸ್ (ಐ)ನ ಒಂದು ಗುಂಪು ಎಡರಂಗ ಸರಕಾರದ ಮೊದಲ ಅವಧಿಯಲ್ಲಿ ಪ್ರಶಾಂತ್ ಸೂರ್‌ರವರ ದಕ್ಷ ಆಡಳಿತಕ್ಕಾಗಿ ಅವರನ್ನು ಅಭಿನಂದಿಸಿದ್ದವು. ಆದರೆ ಕಾಂಗ್ರೆಸ್ (ಐ)ನ ಸುಬ್ರತ್ ಮುಖರ್ಜಿ ಹಾಗೂ ಇತರರಿಗೆ ಸೂರ್ ಅವರ ಮೇಲೆ ಸಿಟ್ಟಿರಲು ಕಾರಣವಿದೆ. ಸುಬ್ರತ್ ಮುಖರ್ಜಿ ಸ್ವಯುಮಾಡಳಿತ ಮಂತ್ರಿಯಾಗಿದ್ದಾಗ ನಡೆಸಿದ ಭ್ರಷ್ಟಾಚಾರವನ್ನು ಬಯಲಿಗೆಳೆದಿದ್ದವರು ಪ್ರಶಾಂತ್ ಸೂರ್. ಆದ್ದರಿಂದ ಅವರ ಸುಳ್ಳಿನ ಕಾರ್ಖಾನೆ ಒಂದಾದ ಮೇಲೊಂದರಂತೆ ಸುಳ್ಳು ಆಪಾದನೆಗಳನ್ನು ಉತ್ಪಾದಿಸುತ್ತಿದೆ. ಆ ಕಾರ್ಖಾನೆಯ ಇತ್ತೀಚಿನ ಉತ್ಪಾದನೆಯೆಂದರೆ ಸೂರ್ ಅವರು ಮಣ್ಣು ತೋಡುವ ಕಂಟ್ರಾಕ್ಟರುಗಳಿಗೆ ಹೆಚ್ಚು ದರ ನೀಡಿದ್ದಾರೆಂಬುದು. ಈ ಆಪಾದನೆಯಲ್ಲಿ ಹುರುಳಿಲ್ಲವೆಂದು ತನಿಖೆ ನಡೆಸಿ ತಿಳಿದುಕೊಂಡರೂ ಮುಖ್ಯಮಂತ್ರಿಗಳು ಕಾಂಗ್ರೆಸ್ (ಐ)ನ ಆಪಾದನೆಯೊಂದನ್ನು ತಣ್ಣಗಾಗಿಸಲು ನ್ಯಾಯಾಂಗ ತನಿಖೆಗೆ ಆಜ್ಞೆ ಮಾಡಿದ್ದಾರೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಪಶ್ಚಿಮ ಬಂಗಾಳದ ದರ 17 ರೂ. ಆಗಿದ್ದರೆ ಕೇಂದ್ರ ಸರಕಾರ ಅದೇ ಕೆಲಸಕ್ಕೆ 27 ರೂ ವರೆಗೆ ನೀಡುತ್ತಿದೆ. ಸುಬ್ರತ್ ಮುಖರ್ಜಿ ಇದಕ್ಕೆ ಯಾವ ಕೇಂದ್ರ ಮಂತ್ರಿಯ ಮೇಲೆ ಭ್ರಷ್ಟಾಚಾರದ ಆರೋಪ ಹೊರಿಸುತ್ತಾರೋ ಗೊತ್ತಿಲ್ಲ.

ಅದೇ ರೀತಿ ತಿಲಜಲ ಹಾಗೂ ಬರುಯೀಪುರದಲ್ಲಿ ನಡೆದ ಘಟನೆಗಳ ಬಗೆಗೂ ಸುಳ್ಳು ಸುದ್ದಿಗಳನ್ನು ಹರಡಿಸಿ ಪೋಲೀಸರು ದಂಗೆಯೇಳುವಂತೆ ಪ್ರುಸಲಾಯಿಸುತ್ತಿದ್ದಾರೆ ಅವರು. ಇದರಲ್ಲಿ ಪೋಲೀಸ್ ಸಂಘದ ಒಂದು ಸಣ್ಣ ಗುಂಪೂ ಅವರೊಡನೆ ಸೇರಿಕೊಂಡಿದೆ. ಎಲ್ಲಾ ಪ್ರಜಾಪ್ರಭುತ್ವವಾದಿಗಳು ಇಲ್ಲಿ ಗಮನಿಸಬೇಕಾದುದೆಂದರೆ 1970-72ರ ನಡುವೆ 74 ಪೋಲೀಸರ ಕಗ್ಗೊಲೆಯಾದಾಗ ಈ ಜನ ತುಟಿಪಿಟಿಕ್ಕೆನ್ನಲಿಲ್ಲ. ಸುತ್ತಮುತ್ತಲ ಕಾಂಗ್ರೆಸ್ (ಐ) ಆಳ್ವಿಕೆಯ ರಾಜ್ಯಗಳಲ್ಲಿ ಪೋಲೀಸರ ಮೇಲೆ ಅಮಾನುಷ ದಬ್ಬಾಳಿಕೆ ನಡೆದಾಗ ಇವರ ಬಾಯಿಂದ ಒಂದು ಸ್ವರವೂ ಹೊರಡಲಿಲ್ಲ. ಪಶ್ಚಿಮ ಬಂಗಾಳದಲ್ಲಿ ಎಡರಂಗ ಸರಕಾರ ಪೋಲೀಸರ ಪ್ರಜಾಪ್ರಭುತ್ವ ಹಕ್ಕುಗಳನ್ನು ಮಾನ್ಯ ಮಾಡಿ ಅವರಿಗೆ ಹಲವು ಸೌಲಭ್ಯಗಳನ್ನು ಕಲ್ಪಿಸಿ ಪೋಲೀಸ್ ಪಡೆಯಲ್ಲಿ ಹೊಸ ಗೌರವ ಭಾವನೆ ತುಂಬಿಸುತ್ತಿರುವಾಗ ಈ ಕಾಂಗ್ರೆಸ್ (ಐ) ಹಾಗೂ ಇತರ ಕರಾಳ ಶಕ್ತಿಗಳು ಬಾಲ ಬಿಚ್ಚುತ್ತಿವೆ.

ಕಾಂಗ್ರೆಸ್ (ಐ) ಹಾಗೂ ಅವರ ಏಜೆಂಟರ ಈ ಕರಾಳ ಕೃತ್ಯಗಳನ್ನು ಮೆರವಣಿಗೆ, ಸಭೆ, ಕರಪತ್ರಗಳ ಮೂಲಕ ಬಯಲಗೆಳೆಯಲು ಸಿ.ಪಿ.ಐ. (ಎಂ)ನ ಕಲ್ಕತ್ತಾ ಜಿಲ್ಲಾ ಸಮಿತಿ ಕಾರ್ಯಕ್ರಮ ಹಾಕಿಕೊಂಡಿದೆ. ಸಿ ಪಿ ಐ. (ಎಂ) ನ ರಾಜ್ಯ ಕಾರ್ಯದರ್ಶಿ ಮಂಡಳಿ ಕಾಂಗ್ರೆಸ್ (ಐ) ನ ಈ ಕುಯುಕ್ತಿಗಳ ಬಗ್ಗೆ ಜಾಗರೂಕರಾಗಿರಬೇಕೆಂದು ಜನತೆ ಹಾಗೂ ಪೋಲೀಸರಿಗೆ ಕರೆ ನೀಡಿ ಬರಗಾಲದ ಸಂಕಷ್ಟಗಳನ್ನು ಎದುರಿಸುವಲ್ಲಿ ಸರಕಾರಕ್ಕೆ ಬೆಂಬಲವಾಗಿ ನಿಲ್ಲಬೇಕೆಂದು ಕೋರಿದೆ.

●

ಬಿಜಾಪುರ :

ಉದ್ಧಟ ಪೋಲಿಸ್ ಅಧಿಕಾರಿ ವರ್ತನೆಗೆ ಪ್ರತಿಭಟನೆ

ಬಿಜಾಪುರ ತಾಲ್ಲೂಕಿನ ಸಬ್ ಇನ್‌ಸ್ಪೆಕ್ಟರ್ ಗೌವಂತ ಎಂಬ ಅಧಿಕಾರಿ ತನ್ನ ಉದ್ಧಟತನದಿಂದ ಜನತೆಗೆ ತುಂಬ ತೊಂದರೆ ಕೊಡುತ್ತಿದ್ದಾರೆ. ಈತನ ವರ್ತನೆಯನ್ನು ಪ್ರತಿಭಟಿಸಿ ಜಿಲ್ಲಾ ರೈತ ಸಂಘದ ನೇತೃತ್ವದಲ್ಲಿ, ಭಾರೀ ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು. ನೇತೃತ್ವವನ್ನು ಭೀಮಸಿ ಕಲಾದಗಿ, ಸಿ.ಬಿ.ಮಣ್ಣೂರ. ಎ.ಎಚ್. ಹೊನ್ನುಟಗಿ ಮತ್ತಿತರರು ವಹಿಸಿದ್ದರು.

ಇದೇ ಸಂದರ್ಭದಲ್ಲಿ, ನಾಲ್ಕು ಜನ ಪೌರಕಾರ್ಮಿಕರನ್ನು ಅಕ್ರಮ ಸಸ್ಪೆಂಡ್ ಮಾಡಿದ ಕಮೀಷನರರ ಕ್ರಮವನ್ನು ಖಂಡಿಸಿ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳಲು ಒತ್ತಾಯಿಸಲಾಯಿತು.

ಚೀನಾದ ಅದ್ಭುತ ಪ್ರಗತಿ

(6ನೇ ಪುಟದಿಂದ)

ಕುಟುಂಬಗಳು. ಈ ನಿರ್ಧಾರಗಳು ಬಂಡವಾಳಶಾಹಿಗಳ, ಭೂಮಾಲಿಕರ, ಆಸ್ತಿವಂತರ, ಶ್ರೀಮಂತರ ಪರವಾಗಿಯೇ ಇರುವುವು. ಆದುದರಿಂದ ಆರ್ಥಿಕ ಕ್ಷೇತ್ರದಲ್ಲಿ ಅರಾಜಕತೆ ಕಾಣುತ್ತದೆ. ಸಮಾಜವಾದಿ ರಾಷ್ಟ್ರಗಳಲ್ಲಿ ಅಗತ್ಯತೆಗನುಗುಣವಾಗಿ ಉತ್ಪಾದನೆ, ಉತ್ಪಾದನೆ ಹೆಚ್ಚಿದಂತೆ ಬಳಕೆಯೂ ಹೆಚ್ಚುವಂತೆ ಜನರ ವರಮಾನವನ್ನೂ ಹೆಚ್ಚಿಸಲಾಗುವುದು; ಉದ್ಯೋಗಾವಕಾಶಗಳನ್ನೂ ಹೆಚ್ಚಿಸಲಾಗುವುದು. ಬಂಡವಾಳಶಾಹಿ ಸಮಾಜಗಳಲ್ಲಿ ಲಾಭಕ್ಕಾಗಿ ಉತ್ಪಾದನೆ, ಅಧಿಕ ಬೆಲೆಗೆ ಮಾರಾಟ, ಕಡಿಮೆ ಕೂಲಿಗೆ ಉತ್ಪಾದನೆ. ಪರಿಣಾಮ, ಉತ್ಪಾದನೆಗೆ ಸರಿಯಾಗಿ ಆಂತರಿಕ ಮಾರುಕಟ್ಟೆ ಬೆಳೆಯುವುದಿಲ್ಲ. ಬದಲು ಕ್ಷೀಣಿಸುತ್ತಾ ಹೋಗುವುದು ! ಉದ್ಯೋಗಾವಕಾಶ ಹೆಚ್ಚುವ ಬದಲು ಕಡಿಮೆಯಾಗುತ್ತಾ ಬರುವುದು !

ಅಭಿವೃದ್ಧಿ ಹೊಂದಿದ ಅಮೇರಿಕ, ಪ.ಯುರೋಪ್, ಜಪಾನ್ ಮುಂತಾದ ಬಂಡವಾಳಶಾಹಿ ದೇಶಗಳು ನಿರುದ್ಯೋಗ, ಹಣದುಬ್ಬರ, ಆರ್ಥಿಕ ಹಿಂಜರಿತದಂತಹ ಸಮಸ್ಯೆಗಳನ್ನು ಎದುರಿಸುತ್ತಿರುವಾಗ, ಅವುಗಳನ್ನು ಅವಲಂಬಿಸುತ್ತಿರುವ ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶಗಳೂ ಅಂತಹ ಆರ್ಥಿಕ ದುಃಸ್ಥಿತಿಗಳಿಂದಲೇ ನರಳುತ್ತಿರುವಾಗ, ಚೀನವೂ ಸೇರಿದಂತೆ ಸಮಾಜವಾದಿ ರಾಷ್ಟ್ರಗಳಲ್ಲಿ ಆರ್ಥಿಕ ಪ್ರಗತಿ ಹೆಚ್ಚುತ್ತಿದೆ, ಉದ್ಯೋಗಾವಕಾಶಗಳೂ ಹೆಚ್ಚುತ್ತಿವೆ. 1978–81ರಲ್ಲಿ ಚೀನಾದಲ್ಲಿ 26 ಮಿಲಿಯ ಹೊಸ ಉದ್ಯೋಗಾವಕಾಶಗಳನ್ನೊದಗಿಸಲಾಗಿದೆ. ಭಾರತದಲ್ಲಿ ನಿರುದ್ಯೋಗಿಗಳ ಸಂಖ್ಯೆಯು 130 ಮಿಲಿಯಕ್ಕೂ ಮೀರಿದೆ ! ಕಾರಣ ? ಭಾರತ ಮತ್ತು ಚೀನಾ ದೇಶಗಳ ಆರ್ಥಿಕ ವ್ಯವಸ್ಥೆಯಲ್ಲಿರುವ ಮೂಲಭೂತ ವ್ಯತ್ಯಾಸಗಳು. ಭಾರತ ಬಂಡವಾಳಶಾಹಿ ಪದ್ಧತಿಯನ್ನು ಅನುಸರಿಸುತ್ತಿದೆ, ಶೇ. 80ರಷ್ಟು ರಾಷ್ಟ್ರೀಯ ಉತ್ಪಾದನೆ, ವಿತರಣೆ ಖಾಸಗೀ ಕ್ಷೇತ್ರದಲ್ಲಿದೆ. ಚೀನಾದಲ್ಲಿ ಕೃಷಿ, ಕೈಗಾರಿಕೆ, ವಿತಾರಣಾ ವ್ಯವಸ್ಥೆ ಬಹುಪಾಲು ಸಾರ್ವಜನಿಕ ಕ್ಷೇತ್ರದಲ್ಲಿವೆ. ವರ್ಗ ಶೋಷಣೆಯು ಕೊನೆಗೊಂಡಿದೆ. ಆರ್ಥಿಕ ಅಭಿವೃದ್ಧಿ ಜನರ ಅಗತ್ಯತೆಗಳಿಗನುಗುಣವಾಗಿ ಯೋಜನಾ ಬದ್ಧವಾಗಿದೆ. ಆದುದರಿಂದ ಇಲ್ಲಿ ಆರ್ಥಿಕ ವಿಷಯಗಳಲ್ಲಿ ಅರಾಜಕತೆ ಇಲ್ಲ. ಪ್ರಕೃತಿಯ ವಿಕೋಪಗಳಿಂದಾಗಿ, ಮಾನವ ಸಹಜವಾದ ತಪ್ಪುಗಳಿಂದಾಗಿ, ಯೋಜನೆಯ ಗುರಿಗಳನ್ನು ಕೆಲವೊಮ್ಮೆ ಮುಟ್ಟಲು ಸಾಧ್ಯವಾಗದೇ ಇರಬಹುದು. ಆದರೆ, ಪ್ರಕೃತಿಯ ವಿಕೋಪಗಳೇ ಆಗಲಿ, ಯೋಜನೆಯ ಕುಂದುಕೊರತೆಗಳೇ ಆಗಲಿ, ಇಡೀ ಆರ್ಥಿಕ ವ್ಯವಸ್ಥೆ ದೊಡ್ಡ ದುಃಸ್ಥಿತಿಗೆ ದುಮುಖಬೇಕಾದ ಸಂಭವ ಇರುವುದಿಲ್ಲ. ಪರಿಸ್ಥಿತಿಗನುಗುಣವಾಗಿ ಕುತರ್ಾಗಿ ಯೋಜನೆಯಲ್ಲಿ ತಿದ್ದುಪಡಿ ಮಾಡಿಕೊಂಡು ಜನರ ಕನಿಷ್ಠ ಜೀವನಾವಶ್ಯಕತೆಗಳನ್ನಾದರೂ ಸಮಾನವಾಗಿ ಒದಗಿಸಿಕೊಡಲಾಗುವುದು. ಅನುಕೂಲ ಪರಿಸ್ಥಿತಿಯಲ್ಲಿ ಪುನಃ ಶೀಘ್ರ ಪ್ರಗತಿಯತ್ತ ಮುನ್ನಡೆಯಲಾಗುವುದು. ಬಂಡವಾಳಶಾಹಿ ಪದ್ಧತಿಗಿಂತ ಸಮಾಜವಾದಿ ಪದ್ಧತಿಯು ಉತ್ತಮವೆಂದು ಈಗ ಜಗತ್ತಿಗೇ ತಿಳಿದಿದೆ.

(ಮುಗಿಯಿತು)

ಕುಚೋದ್ಯದ ವರದಿ

ಕುಣಿಗಲ್‌ನ ಸುಮಾರು 60 ಜನ ಸಿ. ಪಿ. ಐ. (ಎಂ) ಬೆಂಬಲಿಗರು ಕಾಂಗ್ರೆ ಸೇರಿದ್ದಾರೆಂದು ಅಂದಾನಯ್ಯ ಎಂಬ ಮಹಾಶಯ ಪತ್ರಿಕಾ ಪ್ರಕಟನೆ ಹೊರಡಿಸಿದ್ದಾರೆ. (ಕನ್ನಡ ಪ್ರಭ– 1–12–82).

ಈ ಕುಚೋದ್ಯದ ವರದಿಯನ್ನು ಅಲ್ಲಗೆಳೆದು ಸಿ.ಪಿ.ಐ. (ಎಂ) ಕುಣಿಗಲ್ ಘಟಕದ ಕಾರ್ಯದರ್ಶಿ ಕಾಂ। ಅಬ್ದುಲ್ ಅಲೀಂ (ಬಡೇಸಾಬ್) ಪತ್ರಿಕಾ ಪ್ರಕಟನೆ ನೀಡಿದ್ದಾರೆ.

"ಅನೇಕ ಹೋರಾಟಗಳಲ್ಲಿ ತ್ಯಾಗ ಬಲಿದಾನ ಮಾಡಿರುವ ನಮ್ಮ ಪಕ್ಷದ ಸದಸ್ಯರು ಮತ್ತು ಬೆಂಬಲಿಗರು, ಭ್ರಷ್ಟಾಚಾರದಿಂದ ಕೂಡಿದ ಜಮೀನ್ದಾರಿ, ಬಂಡವಾಳಶಾಹಿಗಳ ರಕ್ಷಕ ಕಾಂಗ್ರೆಯ ವಿರುದ್ಧ ಹೋರಾಡುವರೇ ಹೊರತು, ಕಾಂಗ್ರೆ ಜೊತೆ ಸೇರುವದು ಊಹೆಗೂ ನಿಲುಕದ ವಿಷಯ" ಎಂದು ಅವರು ತಿಳಿಸಿದ್ದಾರೆ.

ಇತ್ತೀಚೆಗೆ ತಾನೆ ಇಂಟಕ್ (ಐ) ನೇತೃತ್ವದ ಬಾಲಬಡುಕ ನೀತಿಯನ್ನು ವಿರೋಧಿಸಿ ರೇಷ್ಮೆ ಇಲಾಖೆಯ ಕಾರ್ಮಿಕರು ಸಿ.ಐ.ಟಿ.ಯು.ಗೆ ಬಂದಿರುವುದನ್ನು ಇಲ್ಲಿ ನೆನೆಯಬಹುದು.

○

ಹರಿಹರ :

ಮುಷ್ಕರ ನಿರತ ಪಾಲಿಫೈಬರ್ ಕಾರ್ಮಿಕರನ್ನು ಬೆಂಬಲಿಸಿ ಸೌಹಾರ್ದ ಕಾರ್ಯಾಚರಣೆ

ನವೆಂಬರ್ 21 ರಂದು ಹರಿಹರದಲ್ಲಿ ನಡೆದ ಗ್ವಾಲಿಯರ್ ರೆಯಾನ್ ಕಾರ್ಮಿಕರ ಅಖಿಲ ಭಾರತ ಮಟ್ಟದ ಸಮಾವೇಶದ ತೀರ್ಮಾನದನ್ವಯ ಡಿಸೆಂಬರ್ 1 ರಂದು ಸಮನ್ವಯ ಸಮಿತಿಯ ನೇತೃತ್ವದಲ್ಲಿ ಮುಷ್ಕರ ನಿರತ ಕಾರ್ಮಿಕರನ್ನು ಬೆಂಬಲಿಸಿ ಸಭೆ ನಡೆಯಿತು. ಅಧ್ಯಕ್ಷತೆಯನ್ನು ಕಾಂ| ವಿ. ಜಿ. ಕೆ. ನಾಯರ್ ವಹಿಸಿದ್ದರು. ಹರಿಹರ ಪಾಲಿಫೈಬರ್ ಕಾರ್ಮಿಕರು ಅಕ್ಟೋಬರ್ 17 ರಿಂದ ಮುಷ್ಕರ ನಡೆಸಿರುವುದನ್ನು ಇಲ್ಲಿ ನೆನೆಯಬಹುದು. ಪಾಲಿಫೈಬರ್ ಮತ್ತು ಗ್ರಾಸಲೀನ್ ಡಿವಿಜನ್ ಕಾರ್ಖಾನೆಗಳ ಎಲ್ಲಾ ಕಾರ್ಮಿಕ ಸಂಘಗಳೂ ಮೆರವಣಿಗೆ ಹೊರಡಿಸಿ ಸಭೆಯಲ್ಲಿ ಪಾಲ್ಗೊಂಡಿದ್ದವು. ಎ.ಐ.ಟಿ.ಯು.ಸಿ.ಯನ್ನು ಪ್ರತಿನಿಧಿಸಿ ಕಾಂ| ಕರಿಸಿದ್ಧಪ್ಪ, ಸಿ.ಐ.ಟಿ.ಯು. ಸಂಘದ ಕಾಂ| ಕೆಂಚರೆಡ್ಡಿ, ಸ್ಟಾಫ್ ಅಸೋಸಿಯೇಷನ್ ಶೆಟ್ಟಿ, ಗ್ರಾಸಲೀನ್ ಸಂಘದ ಮುಖಂಡ ಅಲ್ತಾಫ್ ಮತ್ತಿತರರು ಮಾತನಾಡಿದರು.

ಬೆಳಿಗ್ಗೆ (ಡಿಸೆಂಬರ್ 1) ಮುಷ್ಕರ ನಿರತ ಕಾರ್ಮಿಕರು ಪಾಲಿಫೈಬರ್ ಕಾರ್ಖಾನೆ ಗೇಟ್ ಎದರು ಪಿಕೆಟಿಂಗ್ ನಡೆಸಿದರು. ನೇತೃತ್ವವನ್ನು ಕಾಂ| ಎಂ. ಎಸ್. ಆನಂದರಾವ್, ಬಸವರಾಜ ವಹಿಸಿದ್ದರು. ಪಿಕೆಟಿಂಗ್ ನಡೆಸಬಾರದೆಂದು ಕೋರ್ಟಿನಿಂದ ತಡೆಯಾಜ್ಞೆ ತಂದು ಕಾರ್ಯಕ್ರಮವನ್ನು ವಿಫಲಗೊಳಿಸಲು ಆಡಳಿತವರ್ಗ ಹವಣಿಸಿತ್ತು. ಟ್ರೇಡ್ ಯೂನಿಯನ್ ಕಾಯ್ದೆ ಸೆ. 18ರ ಪ್ರಕಾರ ಪಿಕೆಟಿಂಗ್ ನಡೆಸಲು ಇರುವ ಹಕ್ಕನ್ನು ಚಲಾವಣೆಮಾಡಿ ಕೆಲಸಕ್ಕೆ ಬಂದಿದ್ದ ಸ್ಟಾಫ್‌ನವರನ್ನು ಸಂಘದ ಕಾರ್ಯಕರ್ತರು ತಡೆದು ಹಿಂದೆ ಕಳಿಸಿದರು.

ರೈತರ ವಿಧಾನ ಸೌಧ ರ್‍ಯಾಲಿಯನ್ನು ಮುಂದೂಡಲಾಗಿದೆ

ಕರ್ನಾಟಕ ಪ್ರಾಂತ ರೈತ ಸಂಘವು ಡಿಸೆಂಬರ್ 13 ರಂದು ನಡೆಸಲು ಉದ್ದೇಶಿಸಿದ್ದ ವಿಧಾನ ಸೌಧ ರ್‍ಯಾಲಿಯನ್ನು ಚುನಾವಣೆಯ ಕಾರಣದಿಂದಾಗಿ ಮುಂದೂಡಲಾಗಿದೆಯೆಂದು ಪ್ರಾಂತ ರೈತ ಸಂಘದ ಪ್ರಕಟನೆ ತಿಳಿಸಿದೆ.

ಕಾಂ| ಪ್ರಮೋದ್ ಬಾಬು

(1ನೇ ಪುಟದಿಂದ)

ಕಾಂ| ಪ್ರಮೋದ್‌ರ ನಿಧನಕ್ಕೆ ಸಂತಾಪ ಸೂಚಿಸಿ ದೇಶದ ಉದ್ದಗಲಗಳಿಂದ ಸಂತಾಪ ಸೂಚಕ ಸಂದೇಶಗಳ ಸುರಿಮಳೆಯಾಗುತ್ತಿದೆ. "ಭಾರತ ಕಮ್ಯೂನಿಸ್ಟ್ ಚಳವಳಿಯ ಬಲಿಷ್ಟ ಆಧಾರ ಸ್ಥಂಬ ಕುಸಿದು ಬಿತ್ತು" ಎಂದು ಕಾಂ| ಇ. ಎಂ. ಎಸ್. ಶೋಕಿಸಿದ್ದಾರೆ. ಕಾಂ| ಪ್ರಮೋದ್‌ರ ದೇಹವನ್ನು ಶನಿವಾರ ಕಲ್ಕತ್ತೆಗೆ ತರಲಿದ್ದು, ಭಾನುವಾರ (ಡಿಸೆಂಬರ್ 5) ದಂದು ಅಂತ್ಯ ಸಂಸ್ಕಾರ ನಡೆಯಲಿದೆ.

ಅತ್ಯಂತ ಸರಳ ಜೀವನ, ರಾಜಿಯಿಲ್ಲದ ಆದರ್ಶ ಧೀರ, ಸಂಗಾತಿಗಳೊಂದಿಗೆ ನಿಕಟ ಸಂಬಂಧ ಕಾಂ| ಪ್ರಮೋದ್ ಅವರದು. ಪಿ. ಡಿ. ಜಿ. ಎಂಬ ಮೂರಕ್ಷರ ವಂಗನಾಡಿನ ದುಡಿಯುವ ಜನಸ್ತೋಮಕ್ಕೆ ಸ್ಫೂರ್ತಿದಾಯಕ.

ಮೊದಲ ನೋಟಕ್ಕೆ ಒರಟಾಗಿ ಕಾಣುತ್ತಿದ್ದ ಕಾಂ|ಪ್ರಮೋದ್, ವಂಗನಾಡಿನ ಸಹಸ್ರಾರು ಸಂಗಾತಿಗಳಿಗೆ ಆತ್ಮೀಯ ಪ್ರಮೋದ್ ದಾ ಆಗಿದ್ದರು.

ಹೊಸ ತಲೆ ಮಾರಿಗೆ ತುಂಬ ಮಾರ್ಗದರ್ಶನವಾಗಿತ್ತು ಅವರ ಜೀವನ. ಕಲ್ಕತ್ತೆಯ ಹರೇಕೃಷ್ಣ ಕೋನಾರ್ ರಸ್ತೆಯಲ್ಲಿಯ ಪಕ್ಷದ ಕಮ್ಯೂನ್‌ನಲ್ಲಿ ಅವರ ವಾಸ. ಬೆಳಿಗ್ಗೆ ಐದು ಘಂಟೆಯಿಂದ ಪ್ರಾರಂಭವಾಗುತ್ತಿತ್ತು ಅವರ ದಿನಚರಿ. ಅವಿರತ ಕೆಲಸ ಕೊನೆಯವರೆಗೂ ತಮ್ಮ ಸ್ವಂತದ ಕೆಲಸ-ಬಟ್ಟೆ ಒಗೆಯುವದು ಇತ್ಯಾದಿ ಸ್ವತಃ ಮಾಡುತ್ತಿದ್ದರು. ಕಲ್ಕತ್ತೆಯಲ್ಲಿರುವ ಪಕ್ಷದ ಆಫೀಸಿಗೆ ತೆರಳಿದವರು ಕಾಣುತ್ತಿದ್ದುದು ಧೋತಿ ಮತ್ತು ಬನಿಯನ್ ಧರಿಸಿ ಕೆಲಸ ಕಾರ್ಯಗಳಲ್ಲಿ ಮುಳುಗಿರುತ್ತಿದ್ದ ಪ್ರಮೋದರನ್ನು. ಸದಾಕಾಲ ಉದ್ದ ಚುಟ್ಟಾ (ಚುರೂಟ) ಬಾಯಲ್ಲಿರುತ್ತಿತ್ತು. ಕಾಯಿಲೆ ತುಂಬ ಹೆಚ್ಚಾದಾಗಲೂ ಚುಟ್ಟಾ ಬಿಟ್ಟಿರಲಿಲ್ಲ.

ಪಕ್ಷ ಎದುರಿಸಿದ ಅತ್ಯಂತ ಗಂಭೀರ ಘಟ್ಟಗಳಲ್ಲೂ ಪಕ್ಷವನ್ನು ಕಾಂ| ಪ್ರಮೋದ್ ಮುನ್ನಡೆಸಿದ್ದರು. ಪರಿಷ್ಕರಣವಾದ ಹಾಗೂ ಸಂಕುಚಿತ (ಸೆಕ್ಟೇರಿಯನ್)ವಾದ ವಿರುದ್ಧ ಅವರದು ಅನವರತ ಹೋರಾಟ. ನಕ್ಸಲ್‌ವಾದದ ಹೆಸರಿನಲ್ಲಿ ಪಕ್ಷಕ್ಕೆ ತುಂಬಾ ಹಾನಿಮಾಡಿದವರೊಂದಿಗೆ ಪ್ರಮೋದ್ ಸೈದ್ಧಾಂತಿಕ ಮತ್ತು ರಾಜಕೀಯ ಹೋರಾಟ ನಡೆಸಿದರು.

1972ರಲ್ಲಿ ಅರೆಫ್ಯಾಸಿಸ್ಟ್ ದಬ್ಬಾಳಿಕೆಯನ್ನು ಎದುರಿಸಿ ಮೇರುಸದೃಶರಾಗಿ ನಿಂತರು ಕಾಂ| ಪ್ರಮೋದ್. ಆ ಸಮಯದಲ್ಲಿ ನೂರಾರು ಸಂಗಾತಿಗಳನ್ನು ಕಳೆದುಕೊಂಡೂ ಅಚಲರಾಗಿ ನಿಂತರು. ಪಕ್ಷದ ಆ ಧೀರ ಸೇನಾನಿಗೆ ವಂಗನಾಡಿನ ಉದ್ದಗಲಗಳ ಪೂರ್ತಿ ಪರಿಚಯವಿತ್ತು. ಪಕ್ಷದ ಪ್ರತಿಯೊಬ್ಬ ಸದಸ್ಯನನ್ನೂ ಹೆಸರಿನಿಂದ ಗುರ್ತಿಸುತ್ತಿದ್ದ ಪ್ರಮೋದರು ಸಂಗಾತಿಗಳ ಕುಟುಂಬದ ಪರಿಸ್ಥಿತಿಯನ್ನೂ ತಿಳಿದುಕೊಂಡಿರುತ್ತಿದ್ದರು. ಈ ಮೂಲಕ ಪ್ರತಿಯೊಬ್ಬ ಸಂಗಾತಿಯ ಹೃದಯ ಸ್ಪಂದನವನ್ನು ಅವರು ಬಲ್ಲವರಾಗಿದ್ದರು.

ಸಂಗಾತಿಗಳ ಆರೋಗ್ಯ-ಅನಾರೋಗ್ಯದ ಕುರಿತು ಕಾಳಜಿ ವಹಿಸಿ ಶ್ರಮವಹಿಸುತ್ತಿದ್ದರು. ಅದು ಅವರ ನಿತ್ಯ ಚಟುವಟಿಕೆಯ ಒಂದು ಭಾಗ. ನಕ್ಸಲೀಯರು ಒಬ್ಬ ಸಂಗಾತಿಯನ್ನು ಕೊಲೆ ಮಾಡಿದ ಸಂದರ್ಭದಲ್ಲಿ ಪ್ರಮೋದರ ಕಣ್ಣಿನಲ್ಲಿ ನೀರು ತುಂಬಿ ದುಃಖಿತರಾದದ್ದನ್ನು ಕಾಂ| ಸುಶೀಲ್ ಮೋಹಿತ್ರ ಜ್ಞಾಪಿಸಿಕೊಂಡಿದ್ದಾರೆ. ಒಬ್ಬ ಸಂಗಾತಿಯನ್ನು ಬೆಳೆಸಿ, ತಯಾರು ಮಾಡಲು 15-20 ವರ್ಷಗಳೇ ಬೇಕು. ಆದರೆ ಅವನನ್ನು ಇಲ್ಲವಾಗಿಸಲು ಹದಿನೈದು ನಿಮಿಷಗಳು ಸಾಕು— ಎಂದವರು ನುಡಿದಿದ್ದರು.

ಪ. ಬಂಗಾಲದಲ್ಲಿ ಆತ ಹೋಗದೇ ಇದ್ದ ಸ್ಥಳಗಳೇ ಇರಲಿಲ್ಲ. ಜನತೆಯ ಯಾವುದೇ ಸಮಸ್ಯೆ ಇರಲಿ, ಅಲ್ಲಿರುತ್ತಿದ್ದರು ಪ್ರಮೋದ್. ತಮ್ಮ ಸ್ವಂತ ಕುಟುಂಬದ ಹಿರಿಯನನ್ನು ಕಳೆದುಕೊಂಡ ದುಃಖ ಪಕ್ಷದ ಸದಸ್ಯರದ್ದು, ಹಿತೈಷಿಗಳದ್ದು.

ಕಲ್ಕತ್ತಾ ಮುನಿಸಿಪಲ್ ಕಾರ್ಪೋರೇಷನ್‌ನಲ್ಲಿ ಒಬ್ಬ ನೌಕರನಾಗಿ, ಸೈಕಲ್‌ನಲ್ಲಿ ಟ್ರೇಡ್ ಯೂನಿಯನ್ ಚಟುವಟಿಕೆಗಳನ್ನು ಆರಂಭಿಸಿದ ಕಾಂ| ಪ್ರಮೋದ್ ದಾಸ್ ಗುಪ್ತಾ ಮುಂದೆ ಪ. ಬಂಗಾಲದ ಆಡಳಿತವನ್ನು ನಿಯಂತ್ರಿಸುವ ಪಕ್ಷದ ಹಾಗೂ ಎಡರಂಗದ ಮುಂದಾಳಾಗಿ ಇದ್ದುಕೊಂಡು ಕಣ್ಮುಚ್ಚಿದರು. ಅವಿವಾಹಿತರಾಗಿದ್ದ ಅವರ ಆಸ್ತಿಯೆಂದರೆ ಬಹುದೊಡ್ಡದಾದ ಕ್ರಾಂತಿ ಚಳವಳಿ.

ಈ ಧೀರ ಸೇನಾನಿಯ ನಿಧನಕ್ಕೆ ಐಕ್ಯರಂಗ ಅತೀವ ದುಃಖ ವ್ಯಕ್ತಪಡಿಸುತ್ತದೆ.

ಕಾಂ| ಪ್ರಮೋದ್ ದಾಸ್ ಗುಪ್ತಾ ಅವರಿಗೆ ಕೆಂಪು ವಂದನೆಗಳು

ಪಿ. ಬಿ. ಶ್ರದ್ಧಾಂಜಲಿ

(1ನೇ ಪುಟದಿಂದ)

ಇದೇ ಸಮಯದಲ್ಲೇ ಕಾಮ್ರೇಡ್ ಪ್ರಮೋದ್ ದಾಸ್ ಗುಪ್ತ ಅವರು ಪಕ್ಷದ ಪಶ್ಚಿಮ ಬಂಗಾಳ ಸಮಿತಿಯ ಮುದ್ರಣಾಲಯವನ್ನು ಸಂಘಟಿಸಿ ಪಕ್ಷದ ಪ್ರಥಮ ಬಂಗಾಳೀ ವಾರ ಪತ್ರಿಕೆ 'ಜನ ಯುದ್ಧ್'ವನ್ನು ಪ್ರಕಟಿಸಿದರು. ನಂತರ 'ಸ್ವಾಧೀನತಾ' ಎಂಬ ದಿನಪತ್ರಿಕೆಯನ್ನು ಆರಂಭಿಸಿದರು. 1948 ಮತ್ತು 51ರ ನಡುವೆ ಆರಂಭವಾದ ಪಕ್ಷದ ಮೇಲಿನ ಆಕ್ರಮಣದ ಕಾಲದಲ್ಲಿ ಕಾಂ| ಪ್ರಮೋದ್ ದಾಸ್ ಗುಪ್ತ ಅವರು ಭೂಗತ ಚಟುವಟಿಕೆಯಲ್ಲಿ ನಿರತರಾದರು. ನಂತರ ಸ್ವಲ್ಪಕಾಲ ಅವರನ್ನು ಬಂಧಿಸಿ ಜೈಲಿನಲ್ಲಿಡಲಾಯಿತು.

1951ರಲ್ಲಿ ಜೈಲಿನಿಂದ ಬಿಡುಗಡೆಯಾದ ನಂತರ ಪಶ್ಚಿಮ ಬಂಗಾಳದಲ್ಲಿ ಪಕ್ಷವನ್ನು ಪುನರ್ ಸಂಘಟಿಸುವಲ್ಲಿ ಮತ್ತು 'ಸ್ವಾಧೀನತಾ' ದಿನ ಪತ್ರಿಕೆಯನ್ನು ಪುನರಾರಂಭಿಸುವಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದರು.

1960ರಲ್ಲಿ ಬರ್ದ್ವಾನ್‌ನಲ್ಲಿ ನಡೆದ ಪಕ್ಷದ ರಾಜ್ಯ ಸಮ್ಮೇಳನದಲ್ಲಿ ಪಶ್ಚಿಮ ಬಂಗಾಳ ರಾಜ್ಯ ಸಮಿತಿಯ ಕಾರ್ಯದರ್ಶಿಯಾಗಿ ಚುನಾಯಿತರಾದರು. ಮತ್ತು ಕೊನೆಯ ದಿನಗಳವರೆಗೂ ಕಾರ್ಯದರ್ಶಿಯಾಗಿ ಉಳಿದಿದ್ದರು.

ಅಮೃತಸರದಲ್ಲಿ ನಡೆದ ಪಕ್ಷದ ಐದನೇ ಸಮ್ಮೇಳನದಲ್ಲಿ ರಾಷ್ಟ್ರೀಯ ಮಂಡಳಿಗೆ ಚುನಾಯಿತರಾದರು ಹಾಗೂ 1960ರಲ್ಲಿ ಕೇಂದ್ರ ಕಾರ್ಯಕಾರೀ ಸಮಿತಿಗೆ ಆಯ್ಕೆಯಾದರು.

ಪಕ್ಷದ 4ನೇ ಸಮ್ಮೇಳನದಲ್ಲಿ ಪ್ರಾರಂಭಗೊಂಡ ಪರಿಷ್ಕರಣ ವಾದದ ವಿರುದ್ಧವಾದ ಹೋರಾಟ ವಿಜಯವಾಡಾ ಸಮ್ಮೇಳನದಲ್ಲಿ ಅತ್ಯುನ್ನತ ಘಟ್ಟವನ್ನು ಮುಟ್ಟಿತ್ತು. ಪರಿಷ್ಕರಣ ವಾದದ ವಿರುದ್ಧವಾಗಿ ನಡೆದ ಈ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಪ್ರಮೋದ್ ದಾಸ್ ಗುಪ್ತ ಅವರು ಆರನೇ ಸಮ್ಮೇಳನದವರೆಗೆ ಹೋರಾಟವನ್ನು ಮುಂದುವರಿಸಿದ್ದರು.

1962ರ ಭಾರತ-ಚೀನಾ ಯುದ್ಧದ ಸಂದರ್ಭದಲ್ಲಿ ಕಮ್ಯುನಿಸ್ಟ್ ಪಕ್ಷದ ನಾಯಕತ್ವದ ಒಂದು ವಿಭಾಗವು ಬಂಧನಕ್ಕೊಳಗಾಗಿ ಜೈಲಿನಲ್ಲಿತ್ತು. ಅದರಲ್ಲಿ ಕಾಂ| ಪ್ರಮೋದ್ ದಾಸ್ ಗುಪ್ತ ಅವರೂ ಒಬ್ಬರಾಗಿದ್ದರು. ಪ್ರಮೋದ್ ದಾಸ್ ಗುಪ್ತ ಮತ್ತಿತರ ನಾಯಕರು ಜೈಲಿನೊಳಗಿದ್ದುಕೊಂಡೇ ಪಶ್ಚಿಮ ಬಂಗಾಳದ ಪಾರ್ಟಿ ಸದಸ್ಯರಿಗೆ ಮಾರ್ಗದರ್ಶನ ನೀಡುತ್ತಾ ಬಂದರು. ಪಕ್ಷದ ಏಳನೇ ಸಮ್ಮೇಳನಕ್ಕೆ ಕರೆ ನೀಡಿದ ತೆನಾಲಿ ಸಮಾವೇಶದ ಮುಖಂಡತ್ವ ವಹಿಸಿದ್ದರು. ಏಳನೇ ಸಮ್ಮೇಳನಕ್ಕೆ ಇನ್ನೂ ಕೆಲವೇ ದಿನಗಳಿರುವಾಗ ಕಾಂ| ಗುಪ್ತ ಮತ್ತು ಇತರ ಪ. ಬಂಗಾಳದ ಮುಖಂಡರನ್ನು ಬಂಧಿಸಿ ಸೆರೆಯಲ್ಲಿಡಲಾಯಿತು. ಸಮ್ಮೇಳನದ ನಂತರ ದೇಶಾದ್ಯಂತ ಕಾಂಗ್ರೆಸ್ ಆಡಳಿತಗಾರರು ಪಕ್ಷದ ಮೇಲೆ ಧಾಳಿಯೆನ್ನಾರಂಭಿಸಿ ಹೆಚ್ಚಿನ ಸಂಖ್ಯೆಯ ಮುಖಂಡರನ್ನು ಬಂಧಿಸಿದರು. ಜೈಲಿನೊಳಗಿದ್ದುಕೊಂಡೇ ಮತ್ತೆ ಪ್ರಮೋದ್ ದಾಸ್ ಗುಪ್ತ ಮತ್ತು ಇತರ ನಾಯಕರು ಏಳನೇ ಸಮ್ಮೇಳನದ ಸಾಧನೆಗಳನ್ನು ಕ್ರೋಡೀಕರಿಸುವ ಮತ್ತು ಪಕ್ಷವನ್ನು ಬಲಪಡಿಸುವತ್ತ ತಮ್ಮ ಮಾರ್ಗದರ್ಶನವನ್ನು ನೀಡಿದರು. ಪಕ್ಷದ ಏಳನೇ ಸಮ್ಮೇಳನದಲ್ಲಿ ಪ್ರಮೋದ್ ದಾಸ್ ಗುಪ್ತ ಅವರನ್ನು ಪೊಲಿಟ್‌ಬ್ಯೂರೋಗೆ ಚುನಾಯಿಸಲಾಯಿತು ಮತ್ತು ತಮ್ಮ ಜೀವಿತದ ಕೊನೆಯವರೆಗೂ ಆ ಸ್ಥಾನದಲ್ಲಿ ಉಳಿದಿದ್ದರು.

ಎದುರಾದ ಎಲ್ಲಾ ಕಷ್ಟಗಳನ್ನು ಎದುರಿಸಿ ತಮ್ಮ ಜೀವನವನ್ನು ಕ್ರಾಂತಿಕಾರೀ ಆದರ್ಶಗಳಿಗಾಗಿ ಮೀಸಲಾಗಿರಿಸಿದ್ದ ತ್ಯಾಗಜೀವಿ ಪ್ರಮೋದ್ ದಾಸ್ ಗುಪ್ತರವರ ಸಾವು ದೇಶದ ಎಡ-ಪ್ರಜಾಸತ್ತಾತ್ಮಕ ಚಳವಳಿಗೆ, ಮುಖ್ಯವಾಗಿ ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷಕ್ಕೆ ದೊಡ್ಡ ನಷ್ಟ.

ಎಡರಂಗವನ್ನು ಪಶ್ಚಿಮ ಬಂಗಾಳದಲ್ಲಿ ಬಲಿಷ್ಠಗೊಳಿಸುವಲ್ಲಿ ಅವರು ವಹಿಸಿದ ಪಾತ್ರ ಅತ್ಯಂತ ಮಹತ್ವದ್ದಾಗಿತ್ತು. ಅನೇಕ ಬಿಕ್ಕಟ್ಟಿನ ಸಂದರ್ಭಗಳಲ್ಲಿ, ಪಕ್ಷದ ಮೇಲೆ ಭೀಕರ ಧಾಳಿ ನಡೆಯುತ್ತಿದ್ದಂತಹ ಸಂದರ್ಭದಲ್ಲಿ ಪಕ್ಷವನ್ನು ಪ. ಬಂಗಾಳದಲ್ಲಿ ಸಮರ್ಥವಾಗಿ ಮುನ್ನಡೆಸಿದ ನಾಯಕರಾಗಿದ್ದವರು ಪ್ರಮೋದ್ ದಾಸ್ ಗುಪ್ತ.

Printed & Published by P. Ramachandra Rao by him on behalf of the Communist Party of India (Marxist) Karnataka State Committee, L-56 K. V. Temple Street Sultanpet, Bangalore-560 053 Editorial and managerial office :L-56, K. V. Temple Street, Sultanpet, B-560 053 Phone-24154, Prited at Ravee Traders, No. 8/1, J.M. Lane, Balepet Cross, Bangalore-560 053. EDITOR P. RAMACHANDRA RAO